Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 36 /12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 18
Issue - 11
November - 2021


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



## ಕಾರ್ತಿಕ ದೀಪೋತ್ಸವ

ಕಾರ್ತಿಕ ದೀಪೋತ್ಸವವು ದೀಪಗಳ ಬೆಳಕನ್ನು ಸೂಚಿಸುತ್ತದೆ. ದೀಪ ನಮ್ಮ ದೇಹವನ್ನು ಸಂಕೇತಿಸಿದರೆ, ಬೆಳಕು ನಮ್ಮ ಆತ್ಮವನ್ನು ಸಂಕೇತಿಸುತ್ತದೆ.

ನಾವು ದೀಪವನ್ನು ಹಚ್ಚಿದಾಗ, ನಮ್ಮ ಮನಸ್ಸು ಶುದ್ಧವಾಗಿ, ಕತ್ತಲೆ, ಅಜ್ಞಾನ, ಕೋಪ, ದುರಾಸೆ, ಅಸೂಯೆ, ದ್ವೇಷ, ಕಹಿ ಮತ್ತು ಅಸಮಾಧಾನದ ರೂಪದಲ್ಲಿ ಸಂಗ್ರಹವಾದ ಎಲ್ಲಾ ನಕಾರಾತ್ಮಕತೆಯಿಂದ ಮುಕ್ತಗೊಳ್ಳುತ್ತೇವೆ ಎಂಬ ನಂಬಿಕೆಯಿದೆ.




1
ಕನ್ನಡ ರಾಜ್ಯೋತ್ಸವ

5
ದೀಪಾವಳಿ



14 ಮಕ್ಕಳ ದಿನಾಚರಣೆ

14–20
ಸಹಕಾರ ಸಪ್ತಾಹ



19 ಗುರು ನಾನಕ್ ಜಯಂತಿ



20 ಹುತ್ತರಿ ಹಬ್ಬ



22
ಕನಕದಾಸ ಜಯಂತಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5402

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1431



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಆತ್ಮೀಯ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವದ, ದೀಪಾವಳಿಯ, ಗುರುನಾನಕ ಜಯಂತಿಯ, ಕನಕದಾಸ ಜಯಂತಿಯ ಹಾಗೂ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು. ದೀಪಾವಳಿ ದೀಪಗಳ ಹಬ್ಬ. ನರಕಾಸುರನ, ಸಂಹಾರ ಮಹಾಲಕ್ಷ್ಮೀ ಪೂಜೆ, ಬಲಿಪಾಡ್ಯಮಿ ಮುಂತಾದ ಹಬ್ಬಗಳನ್ನು ಸೌಹಾರ್ದ ಸಹಕಾರಿಗಳು ಹೊಸ ಚೈತನ್ಯದಿಂದ ಸಂಭ್ರಮದಿಂದ ವೈಭವಯುತವಾಗಿ ಆಚರಿಸಿ ಸೌಹಾರ್ದ ಸಹಕಾರಿಗಳ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸಂಕಲ್ಪದ ದೀಪಾವಳಿ ಇದಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

# 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಅರ್ಥಪೂರ್ಣವಾಗಿ ಆಚರಣೆಯಾಗಲಿ. ಕೇಂದ್ರ ಹಾಗೂ ರಾಜ್ಯಗಳ ಸಹಕಾರ ಸಚಿವರು, ಸಹಕಾರ ಇಲಾಖೆ ಮತ್ತು ಸಹಕಾರಿಗಳು ಎಲ್ಲರೂ ಕೂಡಿ ಕಾರ್ಯನಿರ್ವಹಿಸಿ ಸಹಕಾರ ಚಳುವಳಿಯು ಈ ದೇಶದ ಆರ್ಥಿಕ ವ್ಯವಸ್ಥೆಯ ಮುಖ್ಯವಾಹಿನಿಗೆ ಬರುವಂತಾಗಲಿ ಸಹಕಾರಿ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸುವಂತಾಗಲಿ.

ಆತ್ಮೀಯ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವದ, ದೀಪಾವಳಿಯ, ಗುರುನಾನಕ ಜಯಂತಿಯ, ಕನಕದಾಸ ಜಯಂತಿಯ ಹಾಗೂ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು. ದೀಪಾವಳಿ ದೀಪಗಳ ಹಬ್ಬ, ನರಕಾಸುರನ ಸಂಹಾರ, ಮಹಾಲಕ್ಷ್ಮೀ ಪೂಜೆ, ಬಲಿಪಾಡ್ಯಮಿ ಮುಂತಾದ ಹಬ್ಬಗಳನ್ನು ಸೌಹಾರ್ದ ಸಹಕಾರಿಗಳು ಹೊಸ ಚೈತನ್ಯದಿಂದ ಸಂಭ್ರಮದಿಂದ ವೈಭವಯುತವಾಗಿ ಆಚರಿಸಿ ಸೌಹಾರ್ದ ಸಹಕಾರಿಗಳ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸಂಕಲ್ಪದ ದೀಪಾವಳಿ ಇದಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

"ಸಹಕಾರದ ಮೂಲಕ ಸಮೃದ್ಧಿ" ಎಂಬುದು 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯವಾಗಿದೆ. ಇದು ಕೇವಲ ಸಹಕಾರ ಸಪ್ತಾಹದ ಘೋಷಣೆಯಲ್ಲ. ಈ ದೇಶದಲ್ಲಿ ಸಹಕಾರ ಚಳುವಳಿಗೆ ಪ್ರಗತಿಪರ ದಿಕ್ಸೂಚಿಯಾಗಿ ಕೇಂದ್ರದಲ್ಲಿ "ಸಹಕಾರದ ಮೂಲಕ ಸಮೃದ್ಧಿ" ಎಂಬ ಆಶಯದೊಂದಿಗೆ ಸಹಕಾರ ಇಲಾಖೆಗೆ ಪ್ರತ್ಯೇಕ ಸಚಿವಾಲಯ ಪ್ರಾರಂಭಿಸಿ ಒಬ್ಬರು ಅನುಭವಿ ಸಚಿವರು ಹಾಗೂ ಅವರಿಗೆ ಒಬ್ಬರು ಸಹಾಯಕ ಸಚಿವರನ್ನು ನೇಮಕ ಮಾಡಿರುವುದು ಸಹಕಾರಿಗಳಿಗೆ ಈ ಕ್ಷೇತ್ರದ ಬಗ್ಗೆ ಹೊಸ ಚೈತನ್ಯವನ್ನು ತಂದಿದೆ. ಸ್ಫೂರ್ತಿ ತಂದಿದೆ.

ಸಹಕಾರ ಸಪ್ತಾಹದ ಆಚರಣೆ ಯಾರನ್ನು ಒಲೈಸುವುದಕ್ಕಾಗಿ ಅಥವಾ ಯಾವುದೇ ವ್ಯಕ್ತಿಯ ಆಶಯ ಇಡೇರಿಸುವುದಕ್ಕಾಗಿ ಅಥವಾ ರಾಜಕೀಯ ಲಾಭಕ್ಕಾಗಿ ಅಲ್ಲ. ಸಮಗ್ರ ಸಹಕಾರ ಕ್ಷೇತ್ರದ ಪ್ರಗತಿ, ಸಾಧನೆ ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಸಭೆ ಸಮಾರಂಭಗಳ ಮೂಲಕ ಪ್ರಚಾರ ಮಾಡುವುದು. ಸಹಕಾರಿಗಳ, ಸರಕಾರಗಳ, ಸಹಕಾರ ಸಂಸ್ಥೆಗಳ ಸಮನ ಸೆಳೆಯುವುದು ಮತ್ತು ವಿಶೇಷವಾಗಿ ಸಾರ್ವಜನಿಕರ ಗಮನ ಸೆಳೆಯುವುದು ಮತ್ತು ಈ ಕ್ಷೇತ್ರದ ಬಗ್ಗೆ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಮೂಡಿಸುವುದಾಗಿದೆ.

ನಮ್ಮ ದೇಶದ ಸಹಕಾರಿ ಕ್ಷೇತ್ರ ಕಳೆದ 117 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಅನೇಕ ಏಳು ಬೀಳುಗಳನ್ನು ಕಂಡಿದೆ. ವಿಶ್ವದ ಅತಿದೊಡ್ಡ ಸಹಕಾರಿ ವ್ಯವಸ್ಥೆ ಭಾರತದ್ದು ಎಂದು ಹೆಸರು ಪಡೆದಿದೆ. ಸಾಧನೆಗಳು ಸಾಕಷ್ಟು ಪ್ರಮಾಣದಲ್ಲಿ ಆಗಿವೆ. ದೇಶದ ಅರ್ಥ ವ್ಯವಸ್ಥೆಯಲ್ಲಿ ಅಭಿವೃದ್ಧಿಯಲ್ಲಿ ಪ್ರಮುಖ ಸಾಧನವಾಗಿದೆ. ತಡವಾಗಿಯಾದರೂ ಈ ಕ್ಷೇತ್ರವನ್ನು ದೇಶದ ಅರ್ಥ ವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ಗುರುತಿಸುವಂತಾಗಲು ನಡೆಯುತ್ತಿರುವ ಪ್ರಸಕ್ತ ಪ್ರಯತ್ನಗಳಿಗೆ ಸಹಕಾರಿಗಳು ಪ್ರೋತ್ಸಾಹಿಸುವುದು ಅಗತ್ಯ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05-19
ಸರ್ಕಾರದ ಸುತ್ತೋಲೆ .......................... 20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 21-29
**ಲೇಖನಗಳು :**
ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಳಿ ಅವಧಿ 5 ವರ್ಷ ವಿಮರ್ಷೆ .......... ........................................ 30-34
Demutualization and its impact on cooperative sector .............. 35-36

# ಸಂಪಾದಕೀಯ

## ಉತ್ತಮ ಆಡಳಿತ ವ್ಯವಸ್ಥೆ - ಸಹಕಾರಿಗಳ ಆಡಳಿತ ವ್ಯವಸ್ಥೆ (Good Governance - Cooperative Governance)

ಯಾವುದೇ ಒಂದು ವ್ಯವಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರೆ ಅದರ ಆಡಳಿತ ವ್ಯವಸ್ಥೆ ಉತ್ತಮವಾಗಿದೆ ಎಂದು ಹೇಳಬಹುದು. ಒಂದು ಸಂಸ್ಥೆಯನ್ನು ಆಡಳಿತ ಮಾಡುವುದು ವ್ಯವಸ್ಥೆಯ ಒಂದು ಭಾಗ ಮಾತ್ರ ಆಡಳಿತವೇ ಆಡಳಿತ ವ್ಯವಸ್ಥೆ ಎನಿಸುವುದಿಲ್ಲ. ಆಡಳಿತದಿಂದ ವ್ಯವಸ್ಥೆಯನ್ನು ಉತ್ತಮಗೊಳಿಸಬಹುದು (Administration is not Governance. Administration is part of Governance) Managing Committee, Officers and Staff all put together with combined effort can give a Good Governance.

ಅನೇಕ ಸಹಕಾರಿ ಸಂಸ್ಥೆಗಳಲ್ಲೂ ಉತ್ತಮ ಆಡಳಿತ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಸದಸ್ಯನ ಅವಶ್ಯಕತೆಗಳನ್ನು ಸಕಾಲದಲ್ಲಿ ಉತ್ತಮ ಗುಣಮಟ್ಟದಲ್ಲಿ ಒದಗಿಸುವ ವ್ಯವಸ್ಥೆಯೆ ಉತ್ತಮ ಆಡಳಿತ ವ್ಯವಸ್ಥೆ ಎನಿಸುತ್ತದೆ. ಸದಸ್ಯನಿಗೆ ಯಾವುದೇ ಕಾರಣಕ್ಕೂ ಯಾವುದೇ ಹಂತದಲ್ಲಿ ಸೇವೆ ನಿರಾಕರಣೆಯಾಗಕೂಡದು ಸೇವೆ ನಿರಾಕರಣೆಗೆ ಕಾರಣಗಳನ್ನು ನೀಡಕೊಡದು. ವ್ಯವಸ್ಥೆ ಏರು ಪೇರುಗಳು ನಾವುಗಳೇ ಕಾರಣ. ಅದರಿಂದಾಗಿ ನಾವುಗಳು ಸದಾ ಸಿದ್ಧರಾಗಿ ಉತ್ತಮ ಆಡಳಿತವನ್ನು ನೀಡುವ ಸಿದ್ಧತೆಯನ್ನು ಹೊಂದಿರಬೇಕು. ಉತ್ತಮ ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸಲು ಅವಶ್ಯವಾಗಿರುವುದು ಅರಿತ ಸದಸ್ಯ ನುರಿತ ಸಿಬ್ಬಂದಿ. ಅರಿತ ಸದಸ್ಯರ ವರ್ಗದಲ್ಲಿ ಅಧ್ಯಕ್ಷರು, ಆಡಳಿತ ಮಂಡಳಿ ಉಳಿದ ಕಮಿಟಿಗಳು. ವ್ಯವಸ್ಥಾಪಕ ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು, ಕಾರ್ಯದರ್ಶಿ ಹಾಗೂ ಉಳಿದ ಕೆಳಹಂತದ ಅಧಿಕಾರಿಗಳು ನುರಿತ ಸಿಬ್ಬಂದಿ ವರ್ಗದವರೆಂದು ವಿಂಗಡಿಸಬಹುದು.

ಕಾರ್ಪೋರೇಟ್ ಆಡಳಿತ ವ್ಯವಸ್ಥೆಗೆ ಹೋಲಿಸುವುದಾದರೆ ಸಹಕಾರಿ ಸಂಸ್ಥೆಗಳಲ್ಲಿ ಉತ್ತಮ ಆಡಳಿತ ವ್ಯವಸ್ಥೆ ಇನ್ನು ಸುಧಾರಿಸಬೇಕಾಗಿದೆ. ಪ್ರಜಾ ಪ್ರಭುತ್ವದ ತಳಹದಿ ನಮ್ಮ ಸಹಕಾರಿ ಕ್ಷೇತ್ರ ಅಳವಡಿಸಿಕೊಂಡಿರುವುದರಿಂದ ಇದೊಂದು ಸಹಕಾರಿ ಕ್ಷೇತ್ರದ ಅನುಭವ ಪಡೆಯುವ ತರಬೇತಿ ಶಾಲೆ ಎನಿಸಿದೆ. ಈ ವ್ಯವಸ್ಥೆಯ ಬಗ್ಗೆ ಚೆನ್ನಾಗಿ ಮಾಹಿತಿ ಪಡೆದು ಉತ್ತಮ ನಾಯಕತ್ವವನ್ನು ಬೆಳೆಸಿಕೊಳ್ಳಲು ಅವಕಾಶಗಳಿವೆ. ಪ್ರಾಮಾಣಿಕತೆ, ವೃತ್ತಿಪರತೆ, ಪಾರದರ್ಶಕತೆ, ದಕ್ಷತೆ ಇವೆಲ್ಲವುಗಳನ್ನು ಅಳವಡಿಸಿಕೊಂಡು ರೂಢಿಸಿಕೊಂಡು ಸಹಕಾರಿಗಳು ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಅಧಿಕಾರಿಗಳು ಉತ್ತಮ ಕಛೇರಿ ನಾಯಕತ್ವವನ್ನು ಬೆಳೆಸಿಕೊಳ್ಳಬೇಕು (ನಾನ್ ಆಫಿಸಿಯಲ್ ಲೀಡರಶಿಪ್ ಮತ್ತು ಆಫಿಸಿಯಲ್ ಲೀಡರಶಿಪ್) ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡವರೆಲ್ಲರೂ ಈ ಬಗ್ಗೆ ಗಮನ ಹರಿಸಿ ತಮ್ಮ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಉತ್ತಮವಾಗಿ ನಿರ್ವಹಿಸಿದರೆ ಅದುವೆ ಉತ್ತಮ ಆಡಳಿತ ವ್ಯವಸ್ಥೆ.



## ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀ ಎಸ್.ಆರ್. ಉಮಾಶಂಕರ್ ಅಧಿಕಾರ ಸ್ವೀಕಾರ

**ಬೆಂಗಳೂರು :** ಭಾರತೀಯ ಆಡಳಿತ ಸೇವೆಯ ಹಿರಿಯ ಅಧಿಕಾರಿ ಎಸ್.ಆರ್. ಉಮಾಶಂಕರ್ ಅವರು ಸಹಕಾರ ಇಲಾಖೆಯ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ.

## "ಸಂಕಷ್ಟಗಳನ್ನು ಧೈರ್ಯವಾಗಿ ಎದುರಿಸಿದಾಗ ಪರಿಹಾರ ಸುಲಭ"

ಶ್ರೇಣಿ 67



### ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು, ಬೆಂಗಳೂರು.

ಇತ್ತೀಚಿನ ವೃತ್ತಪತ್ರಿಕೆಗಳನ್ನು ದೂರದರ್ಶನ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ಧಿಗಳಲ್ಲಿ ಅತಿ ಹೆಚ್ಚಿನ ವಿಷಯವೆಂದರೆ ಬಂದಿಲ್ಲೊಂದು ಕಾರಣಕ್ಕಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವ ವಿಷಯ. ಬೆಳೆನಾಶ, ಬೆಲೆಯಿಳಿಕೆಯಂಥಹ ಕಾರಣಗಳಿಂದಾಗ ಸಾಲದ ಶೂಲಕ್ಕೊಳಗಾದ ರೈತರು ಹಾಗೂ ವಿವಿಧ ಕಾರಣಗಳೀಗಾಗಿ ಉದ್ಯಮಿಗಳು ಮತ್ತು ಭಗ್ನ ಪ್ರೇಮಿಗಳು ಆತ್ಮಹತ್ಯೆಗೆ ಶರಣಾದ ಸುದ್ಧಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇಂತಹ ವಿಷಯವನ್ನು ಮನಗಂಡ ಆಧ್ಯಾತ್ಮ ಕವಿ ಡಿ.ವಿ.ಜಿಯವರು ಬದುಕಿನ ಸಂಕೀರ್ಣತೆಯೆಂಬ ಯುದ್ಧಕ್ಕೆ ಹೆದರದೇ ಎದೆಯನ್ನು ಗಟ್ಟಿಮಾಡಿಕೊಂಡು ಕಷ್ಟ ಮತ್ತು ಅವಮಾನಗಳನ್ನು ಎದುರಿಸಿದರೆ ವಿಶ್ವದೊಡೆಯನಾದ ಆ ವಿಧಿಯೇ ನಮ್ಮನ್ನು ಮೆಚ್ಚಿ "ಷಹಭ್ಯಾಸಗಿರಿ" ನೀಡಿ ಸಂತೈಸುತ್ತಾನೆನ್ನುವ ವಿಷಯವನ್ನೊತ್ತ ಪದ್ಯವನ್ನು ರಚಿಸಿದ್ದಾರೆ. ಪದ್ಯದ ಲಹರಿ ಈ ಕೆಳಗಿನಂತಿದೆ.

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು
ಬಿದಿಯ ಬಾಯಿಗೆ ಕವಳವಾಗದುಳಿಯುವೆನೆ?
ಎದೆಯನುಕ್ಕಾಗಿಸುತ ಮತಿಗದೆಯ ಪಿಡಿದು ನೀ
ನೆದುರು ನಿಲೆ ಬಿದಿಯೊಳಿವ ॥ಮಂಕುತಿಮ್ಮ॥

"ಜಾತಸ್ಯ ಮರಣಂ ಧೃವಂ" ಹುಟ್ಟಿದವರು ಸಾಯಲೇಬೇಕೆಂಬುದು ಕಟು ಸತ್ಯ "Body is mortal and soul is immortal" ಈ ಪ್ರಪಂಚಕ್ಕೆ ಖಂಡ ಮೇಲೆ ನಾವುಗಳೆಲ್ಲರೂ ಬದುಕನ್ನು ನಡೆಸಲೇಬೇಕು. ಬೇರಗತಿ ಇಲ್ಲ. ಆದರೆ ಯಾವುದೋ ಆಹರ್ತರ ಘಟನೆಯನ್ನಾಧರಿಸಿ ಆದ ಅವಮಾನಕ್ಕಾಗಿಯೋ, ಸೋಲಿಗಾಗಿಯೋ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದರೂ ಸಹ ವಿಧಿಯ ಖಾಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ ಕಾರಣ ವಿಧಿ ನಿಯಮಿಸಿರುವ ಕರ್ಮಗಳನ್ನು ಮಾಡಲೇಬೆಕು. ಬದಲಾಗಿ ತಪಿಸಿಕೊಳ್ಳಲು ಯತ್ನಿಸಿದರೆ ಬಡ್ಡಿ ಸಮೇತ ಮುಂದಿನ ಜನ್ಮದಲ್ಲಿ ತೀರಿಸಲೇಬೇಕಾಗುತ್ತದೆ. ಇದಕ್ಕೆ ಉಪಾಯವೆಂದರೆ ನಮ್ಮ ಎದೆಯನ್ನು ಗಟ್ಟಿ ಮಾಡಿಕೊಂಡು ಕಷ್ಟ ಹಾಗೂ ಅವಮಾನಗಳನ್ನು ಸಹಿಸಿಕೊಂಡು ನಮ್ಮ ಬುದ್ಧಿ ಶಕ್ತಿ ಎನ್ನುವ ಗದೆಯನ್ನು ಹಿಡಿದು ಮುಂದಿರುವ ಕಷ್ಟದ ಸವಾಲುಗಳನ್ನು "ಛಲದರಕ ಮಲ್ಲ" ರಂತೆ ಎದುರಿಸಿದರೆ ಆ ವಿಧಿಯು ನಮ್ಮಗಳ ಸಾಹಸದ ಬುದ್ಧಿಯನ್ನು ಮೆಚ್ಚಿ ಹರ್ಷದಿಂದ ಆಶೀರ್ವಾದ ನೀಡಿ ತಾನೇ ಬಲಿಯುತ್ತಾನೆ. ಆದ್ದರಿಂದ ಬದುಕನ್ನು ಬಿಟ್ಟು ಓಡುವ ಪ್ರಯತ್ನವನ್ನು ಎಂದಿಗೂ ಮಾಡಬೇಡವೆಂಬ ಸಂದೇಶವನ್ನು ನೀಡುತ್ತದೆ ಈ ಕಗ್ಗ. ನಮ್ಮ ಕಣ್ಣಿಗೆ ಕಾಣಿಸಿದ ಆದರೂ ವಿಶ್ವದ ಚಲನೆಯ ಕಾರ್ಯವನ್ನು ಅಚ್ಚುಕಟ್ಟಾಗಿ ನಡೆಸುತ್ತಿರುವ ಒಂದು ಗಹನತತ್ವವೇ ವಿಧಿಯಾಗಿದ್ದು ಇದರ ನಿರ್ದೇಶನದಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲವಾದ್ದರಿಂದ ಏಕಮನಸ್ಸಿನಿಂದ ಕೇಂದ್ರೀಕೃತ ಶಕ್ತಿಯಾದ ವಿಧಿಯನ್ನೇ ತನ್ನ ಪರವನ್ನಾಗಿಸಿಕೊಳ್ಳಲು ಸತತ ಧನಾತ್ಮಕ ಚಿಂತನೆಯಿಂದೊಡಗೂಡಿ ಸಕಲ ಗ್ರಹ ಸೂರ್ಯ ತಾರೆಗಳನ್ನು ಎಡಬಿಡದೆ ಚಾಲನೆಗೊಳಿಸುವ "ಅಸದೃಶ ತಂದೆಯ ಆಶೀರ್ವಾದ ನಮ್ಮ ಮೇಲಿದೆ ನಾನೇ ಗೆಲ್ಲುವನು ಎಂಬ ಪ್ರೇರಣಾಪೂರಕ ಬುದ್ಧಿಯಿಂದ ಕಾರ್ಯ ಪ್ರವೃತ್ತನಾಗಲು ನಿರ್ದೇಶನ ನೀಡುತ್ತದೆ ಈ ಕಗ್ಗ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 18649 ಆಗಿರುತ್ತದೆ. ಇವುಗಳ ಪೈಕಿ 10,187 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8462.

**ಅಕ್ಟೋಬರ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 622, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 229.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 3302 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 353 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,949 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 104 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 441 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ 139 ಪ್ರಕರಣ ದಾಖಲಾಗಿರುತ್ತವೆ.

**ವಿಶೇಷ ಸೂಚನೆ :** ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಬೆಳಗಾವಿ ವಿಭಾಗದಲ್ಲಿ ಅಮಲ್ಜಾರಿ ಶಾಖೆ ಪ್ರಾರಂಭಿಸಿದ್ದು ನವೆಂಬರ್ ಮಾಹೆಯಿಂದ ಬೆಳಗಾವಿ ವಿಭಾಗದ ಸೌಹಾರ್ದ ಸಹಕಾರಿಗಳು ಅಮಲ್ಜಾರಿ ಅರ್ಜಿಗಳನ್ನು ಬೆಳಗಾವಿ ವಿಭಾಗದಲ್ಲೇ ದಾಖಲಿಸಲು ಸೂಚಿಸಿದೆ.

# 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ವಿಧಾನ ಸೌಧದಲ್ಲಿ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರ್ ರವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ನಡುವಳಿಕೆಗಳು.



**ಬೆಂಗಳೂರು** : ದಿನಾಂಕ 28.10.2021 ರಂದು ಸಭೆಯಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾಗಿರುವ ಶ್ರೀ ಜಿ.ಟಿ. ದೇವೇಗೌಡರವರು ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾ ಉಲ್ಲಾರವರು, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು, ನಿರ್ದೇಶಕರು ಹಾಗೂ ಸುದ್ದಿಮಹಾಮಂಡಳದ ಅಧ್ಯಕ್ಷರಾಗಿರುವ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರುಗಳಾದ ಶ್ರೀ ಹೆಚ್.ವಿ. ರಾಜೀವರವರು, ಶ್ರೀ ವೈ.ಟಿ. ಪಾಟೀಲರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ರಾಜ್ಯದ ಸಹಕಾರ ಮಹಾಮಂಡಳಗಳ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡರವರು ಎಲ್ಲ ಗಣ್ಯರನ್ನು ಅಧಿಕಾರಿಗಳನ್ನು ಸ್ವಾಗತಿಸಿ ಸಹಕಾರ ಸಪ್ತಾಹದ ಆಚರಣೆಯ ಅದು ನಡೆದು ಬಂದ ದಾರಿ ಅದರಿಂದಾಗಿ ಸಹಕಾರ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿ ಸಹಕಾರ ಕ್ಷೇತ್ರದ ಬೆಳವಣಿಗೆ ಮುಂತಾದ ವಿವರಗಳನ್ನು ನೀಡಿದರು. ನಂತರ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಮಹಾಮಂಡಳಗಳ ಅಧ್ಯಕ್ಷರುಗಳು ಅಧಿಕಾರಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿಯವರು ಮಾತನಾಡಿ ಸಹಕಾರ ಸಪ್ತಾಹದ ಆಚರಣೆಯಿಂದಾಗಿ ಸಹಕಾರ ಕ್ಷೇತ್ರದ ಬಗ್ಗೆ ಸಹಕಾರಿಗಳಿಗೆ ಸಾರ್ವಜನಿಕರಿಗೆ ಸಹಕಾರಿ ಕ್ಷೇತ್ರದ ಚಟುವಟಿಕೆಗಳ ಪರಿಚಯವಾಗುತ್ತದೆ ಸಹಕಾರಿ ಚಳುವಳಿ ಬೆಳೆಯಲು ಅವಕಾಶವಾಗುತ್ತದೆ ಇದು ಉತ್ತಮ ಸಂಪ್ರದಾಯ ಎಂದು ತಿಳಿಸಿ ಈ ಸಭೆಯ ಅಧ್ಯಕ್ಷತೆ ವಹಿಸಿರುವ ಮಾನ್ಯ ಸಹಕಾರ ಸಚಿವರು ರಾಜ್ಯದ ಎರಡು ಸಹಕಾರ ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಲು ಬಹಳಷ್ಟು ಶ್ರಮವಹಿಸಿದ್ದಾರೆ. ಸಹಕಾರ ನೀಡಿದ್ದಾರೆ. ಶ್ರೀಯುತರಿಗೆ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ವತಿಯಿಂದ ಅನಂತ ಧನ್ಯವಾದಗಳನ್ನು ತಿಳಿಸುತ್ತ ಶಾಲು ಹೊದಿಸಿ ಸನ್ಮಾನಿಸಿದರು.

ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರ ರವರು ಕಳೆದ ಬಾರಿ ಸಹಕಾರ ಸಪ್ತಾಹದ 7 ದಿನಗಳು ಅತ್ಯಂತ ಉತ್ತಮವಾಗಿ ನಡೆದಿದೆ. ಅದರಂತೆ ಈ ಬಾರಿಯ ಸಹಕಾರ ಸಪ್ತಾಹವೂ ಉತ್ತಮವಾಗಿ ನಡೆಯಬೇಕಾದ ಅಗತ್ಯ ಇದೆ. ಅದಕ್ಕಾಗಿ ಈ ಸಭೆಯನ್ನು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ ಶ್ರೀಯುತರು ಸಹಕಾರಿ ಕ್ಷೇತ್ರದಿಂದ ಸದಸ್ಯರಿಗೆ ವಿಶೇಷವಾಗಿ ರೈತರಿಗೆ ಸೌಲಭ್ಯಗಳು ಸುಲಭವಾಗಿ ಸಿಗುವಂತಾಗಬೇಕು. ಅದರಲ್ಲಿ ಸಹಕಾರಿ ಸಂಸ್ಥೆಗಳು ಸಹಕಾರ ಇಲಾಖೆ ಒಂದಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸೇವೆ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೆ ಸಿಗಬೇಕು.

ರಾಜ್ಯದ ಎರಡು ಕಾಯ್ದೆಗಳಿಗೆ ಈಗ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. 97ನೇ ಸಂವಿಧಾನ ತಿದ್ದುಪಡಿ ಸುಪ್ರೀಂ ಕೋರ್ಟ್‌ನಲ್ಲಿ ಬಿದ್ದುಹೋದ ಹಿನ್ನಲೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ರಾಜ್ಯದ ಎಲ್ಲಾ ಸಹಕಾರಿಗಳ ಹಾಗೂ ಹಿರಿಯ ಅಧಿಕಾ–ರಿಗಳ ಅಭಿಪ್ರಾಯ ಪಡೆದು ಮತ್ತೊಮ್ಮೆ ಡಿಸೆಂಬರ್‌ನಲ್ಲಿ ಜರುಗುವ ವಿಧಾನ ಮಂಡಳದಲ್ಲಿ ಪ್ರಸ್ತಾವನೆಯನ್ನ ಅನುಮೋದನೆಗಾಗಿ ಮಂಡಿಸಲಾಗುವುದು.

ಸ್ವೇಚ್ಛಾಚಾರಕ್ಕೆ ಅವಕಾಶ ಬೇಡ. ಸಹಕಾರಿ ಇಲಾಖೆಯ ಅಧಿಕಾರಿಗಳು ಹೆಚ್ಚು ಸಮನ್ವಯತೆಯನ್ನು ಸಾಧಿಸಬೇಕು. ಸಹಕಾರ ಇಲಾಖೆಯ ಅಧಿಕಾರಿಗಳ ಕಾರ್ಯಚಟುವಟಿಕೆಗಳು ಸಹಕಾರ ಇಲಾಖೆ ಹಾಗೂ ಸಹಕಾರ ಸಂಸ್ಥೆಗಳ ಸಂಪೂರ್ಣ ಸಮನ್ವಯತೆ ಇರಬೇಕು ಹುಮ್ಮಸ್ಸು ಹಾಗೂ ಉತ್ಸಾಹದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ನಂತರ 7 ದಿನಗಳ ರಾಜ್ಯ ಮಟ್ಟದ ಕಾರ್ಯಕ್ರಮಗಳ ದಿನಾಂಕ, ಕಾರ್ಯಕ್ರಮದ ವಿಷಯ, ಸ್ಥಳ, ನೇತೃತ್ವ ಸಹಯೋಗ ನೀಡುವ ಸಂಸ್ಥೆಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು.

ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಅರುಣಕುಮಾರ ರವರು ವಂದನಾರ್ಪಣೆ ಮಾಡಿದರು.



ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ ಇವರಿಗೆ ಸನ್ಮಾನ

## ದಿನಾಂಕ 16.11.2021 ರಂದು ಚಿತ್ರದುರ್ಗದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಅಖಿಲ ಭಾರತ ಸಹಕಾರಿ ಸಪ್ತಾಹ ಆಚರಣೆ.



**ಚಿತ್ರದುರ್ಗ :** ದಿನಾಂಕ 02.11.2021 ರಂದು ಮಧ್ಯಾಹ್ನ 4 ಗಂಟೆಗೆ ಸಿ.ಡಿ.ಸಿ.ಸಿ ಬ್ಯಾಂಕ್ ಸಭಾಂಗಣ, ಚಿತ್ರದುರ್ಗದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ದಿನಾಂಕ 16.11.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರ ನೇತೃತ್ವದಲ್ಲಿ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಕುಕ್ಕುಟ ಮಹಾಮಂಡಳ ನಿ.,ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ ಹಾಗೂ ಚಿತ್ರದುರ್ಗ ಜಿಲ್ಲೆಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ **"ಸಹಕಾರ ಸಂಸ್ಥೆಗಳಿಗೆ ವ್ಯಾಪಾರ ಸುಲಭೀಕರಣ ದಿನಾಚರಣೆಯನ್ನು"** ಸಿರಿಗೆರೆ ತರಳಬಾಳೂ ಮಠದ "ಅನುಭವ ಮಂಟಪದಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು, ಜಿಲ್ಲಾ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತ ರೆಡ್ಡಿಯವರು, ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ವೈ. ಹೆಚ್. ಗೋಪಾಲಕೃಷ್ಣ ರವರು, ಸಿ.ಡಿ.ಸಿ.ಸಿ ಬ್ಯಾಂಕ್ ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಇಲ್ಯಾಸ್ ಉಲ್ಲಾ ಷರೀಫ್, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಜಯಪ್ರಕಾಶ, ಮಾನ್ಯ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಸಂಜೀವ ಮೂರ್ತಿ, ಶ್ರೀ ರಾಮರೆಡ್ಡಿ, ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಶ್ರೀ ವೀರಭದ್ರ ಬಾಬು, ನಿರ್ದೇಶಕರು, ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು, ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ ಕಾರಕೂನ್ ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ್ ಕೊರಟಕರ್ ರವರು, ಜಿಲ್ಲೆಯ ಎಲ್ಲಾ ಸಹಕಾರಿ ಮುಖಂಡರು ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಶ್ರೀ ಮುರುಘ ರಾಜೇಂದ್ರ ಮಠದ ಸ್ವಾಮೀಜಿಯವರಾದ ಡಾ. ಶಿವಮೂರ್ತಿ ಮುರುಘ ಶರಣರು ಇವರನ್ನು 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

---

## 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಮಾನ್ಯ ಸಹಕಾರ ಸಂಘಗಳ ನಿಬಂಧಕರ ಅಧ್ಯಕ್ಷತೆ ನಡೆದ ಸಭೆಯ ನಡುವಳಿಕೆಗಳು.



**ಬೆಂಗಳೂರು :** ದಿನಾಂಕ 29.10.2021 ರಂದು ಸಭೆಯಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗು ಶಾಸಕರಾಗಿರುವ ಶ್ರೀ ಜಿ.ಟಿ.ದೇವೇಗೌಡರವರು ಸಹಕಾರ ಸಂಂಘಗಳ ನಿಬಂಧಕರಾದ ಶ್ರೀ ಜಿಯಾ ಉಲ್ಲಾರವರು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು, ನಿರ್ದೇಶಕರು ಹಾಗೂ ಸುದ್ದಿಮಹಾಮಂಡಳದ ಅಧ್ಯಕ್ಷರಾಗಿರುವ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರುಗಳಾದ ಶ್ರೀ ಹೆಚ್‌ವಿ. ರಾಜೀವರವರು, ಶ್ರೀ ಜಿ.ಎನ್. ಪಾಟೀಲ, ಶ್ರೀ ವೈ.ಟಿ.ಪಾಟೀಲರವರು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ರಾಜ್ಯದ ಸಹಕಾರ ಮಹಾಮಂಡಳಗಳ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಶ್ರೀಯುತ ಜಿ.ಟಿ. ದೇವೇಗೌಡರವರು ಸ್ವಾಗತಿಸಿ ಸಭೆಯ ಉದ್ದೇಶ ತಿಳಿಸಿದರು. ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಜಿಯಾ ಉಲ್ಲಾ ಇವರು

ಮಾತನಾಡಿ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ತಿಳಿಸಿದಂತೆ ಸಹಕಾರ ಸಪ್ತಾಹವನ್ನು ಅತ್ಯಂತ ಉತ್ಸಾಹದಿಂದ ಹಾಗೂ ಉತ್ತಮವಾಗಿ ನಡೆಸಬೇಕು. ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಸಮನ್ವಯಾಧಿಕಾರಿಗಳಾಗಿ ನೇಮಿಸಲಾಗುವುದು. ಈ ಸಮನ್ವಯಾಧಿಕಾರಿಗಳು ನೇತೃತ್ವವಹಿಸುವ ಮಹಾಮಂಡಳ, ಸಹಯೋಗ ನೀಡುವ ಸಹಕಾರ ಸಂಸ್ಥೆಗಳು ಹಾಗೂ ಜಿಲ್ಲೆಯ ಎಲ್ಲ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಸಮಾಲೋಚನೆ ಸಭೆ ಮಾಡಿ ಸಿದ್ಧತೆಗೆ ಮಾರ್ಗದರ್ಶನ ಹಾಗೂ ಸಹಕಾರ ನೀಡಿ ಸಪ್ತಾಹವನ್ನು ಉತ್ತಮವಾಗಿ ನಡೆಸಬೇಕು ಎಂದು ತಿಳಿಸಿದರು.

## 68ನೇ ಅಖಿಲ ಭಾರತ ಸಹಕಾರ ಸಪ್ತಾಹ 2021ನೇ ಆಚರಣೆ ಸಂಬಂಧಿಸಿದಂತೆ ಸಮನ್ವಯಾಧಿಕಾರಿಗಳನ್ನು ನೇಮಿಸುವ ಕುರಿತು ಸುತ್ತೋಲೆ

| ದಿನಾಂಕ | ಸಹಕಾರ ಸಪ್ತಾಹದ ದಿನದ ಧ್ಯೇಯೋದ್ದೇಶ | ಸ್ಥಳ | ಮಹಾ ಮಂಡಳದ ಸಮನ್ವಯಾಧಿಕಾರಿ | ಸಮನ್ವಯಾಧಿಕಾರಿಗಳ ಹೆಸರು ಮತ್ತು ಪದನಾಮ |
|---|---|---|---|---|
| 14.11.2021 ಭಾನುವಾರ | ಕೊರೋನಾ ಸೋಂಕನ್ನು ನಿಭಾಯಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಆರೋಗ್ಯ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದು. Role of Cooperatives in Tackling Covid Pandemic and Strengthening Health Cooperatives. | ಬೆಂಗಳೂರು | ಶ್ರೀ ಲಕ್ಷ್ಮಿಪತಯ್ಯ ಕಾರ್ಯದರ್ಶಿ, ಶ್ರೀಮತಿ ವೀಣಾ ನಾಗೇಶ್ ನಿರ್ದೇಶಕರು (ಆರ್ ಅಂಡ್ಇ) | ಶ್ರೀ ಸತೀಶ್ ಬಿ.ಸಿ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು. ಹಾಗೂ ಶ್ರೀ ಕೆ.ಎಸ್.ನವೀನ್, ಸಹಕಾರ ಸಂಘಗಳ ಅಪರ ನಿಬಂಧಕರು (ಗೃಹ ಮತ್ತು ಇತರೆ) ಕೇಂದ್ರ ಕಚೇರಿ, |
| 15.11.2021 ಸೋಮವಾರ | ಸಹಕಾರಿ ಮಾರಾಟ, ಗ್ರಾಹಕ ರೂಪಾಂತರ ಮತ್ತು ಮೌಲ್ಯವರ್ಧನೆ. Cooperative Marketing, Consumers, Processing and Value Addition. | ಉಡುಪಿ | ಶ್ರೀ ಕೆ ಮಲ್ಲಯ್ಯ ಸಹಕಾರ ಶಿಕ್ಷಣಾಧಿಕಾರಿ | ಶ್ರೀ ಪ್ರಸಾದರಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಕಚೇರಿ, |
| 16.11.2021 ಮಂಗಳವಾರ | ಸಹಕಾರ ಸಂಸ್ಥೆಗಳಿಗೆ ವ್ಯಾಪಾರ ಸುಲಭೀಕರಣ. Ease of doing Business for Cooperatives. | ಚಿತ್ರದುರ್ಗ | ಶ್ರೀ ಎಸ್ ಎನ್ ವೇಣುಗೋಪಾಲ್ ಅಂತರಿಕ ಲೆಕ್ಕಪರಿಶೋಧಕರು | ಶ್ರೀ ವೈ ಹೆಚ್ ಗೋಪಾಲಕೃಷ್ಣ, ಸಹಕಾರ ಸಂಘಗಳ ಅಪರ ನಿಬಂಧಕರು (ಹೈನುಗಾರಿಕೆ ಮತ್ತು ಕೈಗಾರಿಕೆ) ಕೇಂದ್ರ ಕಚೇರಿ, |
| 17.11.2021 ಬುಧವಾರ | ಅನ್ವೇಷಣೆಯನ್ನು ತ್ವರಿತಗೊಳಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ, ಉದ್ಯೋಗ ಸೃಷ್ಟಿ ಮತ್ತು ವೃತ್ತಿಪರತೆ. Role of Cooperatives in Fostering Innovation, Employment Generation and Bringing in Professionalism. | ಕಲಬುರಗಿ | ಲಕ್ಷ್ಮೀಕಾಂತ್ ಕಟ್ಟಿಮನಿ ಎಸ್ಟೇಟ್ ಅಧಿಕಾರಿ | ಶ್ರೀ ಎ ಸಿ ದಿವಾಕರ. ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಕೇಂದ್ರ ಕಚೇರಿ, |
| 18.11.2021 ಗುರುವಾರ | ಉದ್ಯಮಶೀಲತೆ ಅಭಿವೃದ್ಧಿ ಮತ್ತು ಸಾರ್ವಜನಿಕ/ಖಾಸಗಿ ಸಹಕಾರಿ ಪಾಲುದಾರಿಕೆ ಬಲಪಡಿಸುವುದು. Entrepreneurship Development and Strengthening Public /Private Cooperative Partnership. | ಬಾಗಲಕೋಟೆ | ಎಂ ಮಲ್ಲರಾಜು ಸಂಪಾದಕರು(ಪ್ರ) | ಶ್ರೀ ಜಿ ಎಂ ಪಾಟೀಲ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಳಗಾವಿ ಪ್ರಾಂತ, ಬೆಳಗಾವಿ. |
| 19.11.2021 ಶುಕ್ರವಾರ | ಯುವಜನ, ಮಹಿಳೆ ಮತ್ತು ಅಬಲವರ್ಗದವರಿಗೆ ಸಹಕಾರ ಸಂಸ್ಥೆಗಳು. Cooperatives for Youth, Women and Weaker sections. | ಬೆಳಗಾವಿ | ಎನ್ ಎಂ ಶಿವಕುಮಾರ್ ಪ್ರಾಂಶುಪಾಲರು ಕೆ.ಐ.ಸಿ.ಎಂ ಬೆಳಗಾವಿ | ಶ್ರೀಮತಿ ಆಶಾ.ಕೆ.ಎಂ. ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಕೇಂದ್ರ ಕಚೇರಿ, |
| 20.11.2021 ಶನಿವಾರ | ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೀಕರಣ ಮತ್ತು ಸಾಮಾಜಿಕ ಜಾಲತಾಣ. Financial Inclusion, Digitalization and Social Media through Cooperatives. | ಚಿಕ್ಕಮಗಳೂರು | ಹೆಚ್ ಡಿ ಮಂಜುನಾಥ್ ಸಹಾಯಕ ಯೋಜನಾಧಿಕಾರಿ | ಶ್ರೀ ಕೆ.ಎಸ್.ನವೀನ್, ಸಹಕಾರ ಸಂಘಗಳ ಅಪರ ನಿಬಂಧಕರು (ಗೃಹ ಮತ್ತು ಇತರೆ) ಕೇಂದ್ರ ಕಚೇರಿ, |

ತಮ್ಮ ವಿಶ್ವಾಸಿ,

(ಎಸ್. ಜಿಯಾಉಲ್ಲಾ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಅಗತ್ಯ ಸಹಕಾರ ನೀಡಿದ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆ



**ಬೆಂಗಳೂರು :** ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಮುತುವರ್ಜಿವಹಿಸಿ ಅಗತ್ಯ ಕಾರ್ಯಗಳನ್ನು ನಡೆಸುವ ಮೂಲಕ ನೆರವು ನೀಡಿದ ಹಾಗೂ ಸಹಕಾರ ಸಂಸ್ಥೆಗಳ ಚುನಾವಣೆಗೆ ಅವಕಾಶ ಕಲ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಕೆ. ರವಿಕುಮಾರ್, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ತುಷಾರ್ ಗಿರಿನಾಥ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಧಿಕಾರಿಯಾದ ಶ್ರೀ ಎಸ್ ಸೆಲ್ವಕುಮಾರ್, ಸಹಕಾರ ಇಲಾಖೆಯ ಮಾನ್ಯ ಸಹಕಾರಿಗಳ ನಿಬಂಧಕರಾದ ಶ್ರೀ ಎಸ್. ಜಿಯಾ ಉಲ್ಲಾ, ಸಹಕಾರ ಸಂಘಗಳ ಅಪರ ನಿಬಂಧಕರಾದ (ಕೈಗಾರಿಕೆ ಮತ್ತು ಡೈರಿ) ಶ್ರೀ ಗೋಪಾಲ ಕೃಷ್ಣ ವೈ.ಎಸ್, ಸಹಕಾರ ಸಂಘಗಳ ಅಪರ ನಿಬಂಧಕರಾದ (ವಸತಿ ಮತ್ತು ಇತರೆ) ಶ್ರೀ ನವೀನ್ ಕೆ.ಎಸ್, ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಇವರು ಭೇಟಿ ಮಾಡಿ ದಸರಾ ಹಬ್ಬದ ಶುಭಾಶಯ ತಿಳಿಸುವುದರೊಂದಿಗೆ ಅಭಿನಂದಿಸಲಾಯಿತು.













**ಬೆಂಗಳೂರು :** ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಮುತುವರ್ಜಿವಹಿಸಿ ಅಗತ್ಯ ಕಾರ್ಯಗಳನ್ನು ನಡೆಸುವ ಮೂಲಕ ನೆರವು ನೀಡಿದ ಹಾಗೂ ಸಹಕಾರ ಸಂಸ್ಥೆಗಳ ಚುನಾವಣೆಗೆ ಅವಕಾಶ ಕಲ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಸಹಕಾರ ಸಂಘಗಳ ಅಪರ ನಿಬಂಧಕರಾದ (ಪತ್ತು) ಶ್ರೀ ಎ.ಸಿ ದಿವಾಕರ್, ಸಹಕಾರ ಸಂಘಗಳ ಅಪರ ನಿಬಂಧಕರಾದ ಕಾನೂನು ಕೋಶದ ಉಸ್ತುವಾರಿ ಶ್ರೀಮತಿ ಆಶಾ ಎಂ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಧಿಕಾರಿಯಾದ ಶ್ರೀ ವೆಂಕಟಸ್ವಾಮಿ, ಸಹಕಾರ ಸಂಘಗಳ ಉಪ ನಿಬಂಧಕರು ಬೆಂಗಳೂರು–01 ಹಾಗೂ ಸೌಹಾರ್ದ ನ್ಯಾಯಾಲಯಕ್ಕೆ ಪೀಠಾಧಿಕಾರಿಯಾಗಿ ನೇಮಕವಾಗಿರುವ ಉಪನಿಬಂಧಕರಾದ ಶ್ರೀ ಶಶಿಧರ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಅಶ್ವತ್ ನಾರಾಯಣ್, ಸಹಕಾರ ಸಂಘಗಳ ಜಂಟಿ ನಿಬಂಧಕರು (ಅರ್ಬನ್ ಬ್ಯಾಂಕ್ ಸೆಲ್) ಶ್ರೀ ಪ್ರಸಾದ್ ರೆಡ್ಡಿ ಹಾಗೂ ಗೌರವಾನ್ವಿತ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಯವರಾದ ಶ್ರೀ ಶಂಕರ್ ಎ ಇವರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ ಇವರು ಭೇಟಿ ಮಾಡಿ ದಸರಾ ಹಬ್ಬದ ಶುಭಾಶಯ ತಿಳಿಸುವುದರೊಂದಿಗೆ ಅಭಿನಂದಿಸಲಾಯಿತು.

## ಸೌಹಾರ್ದ ಸಹಕಾರಿಗಳ ಆದಾಯ ತೆರಿಗೆ ವಸೂಲಾತಿ ಕಿರುಕುಳ ತಡೆಗಾಗಿ Chief Commissioner of Income Tax ರವರೊಂದಿಗೆ ಸಭೆ



**ಬೆಂಗಳೂರು :** ದಿನಾಂಕ 12.10.2021ರಂದು Chief Commissioner of Income Tax ರವರೊಂದಿಗೆ ಸಂಯುಕ್ತ ಸಹಕಾರಿಯ ಸಭೆ ನಡೆದಿರುತ್ತದೆ. ಈ ಹಿಂದಿನ ಭೇಟಿ ಹಾಗೂ ಸಭೆಯ ನಿರ್ಣಯದ ನಂತರವೂ ಸೌಹಾರ್ದ ಸಹಕಾರಿಗಳಿಗೆ ಬರುತ್ತಿರುವ ನೋಟೀಸ್/ಆದೇಶಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. CCIT ಇವರು ಈ ಕೆಳಗಿನಂತೆ ಮಾಹಿತಿಯನ್ನು ತಿಳಿಸಿದ್ದು ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

1. ಸ್ಥಳೀಯ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ Tax & Penalty Recovery Proceedings ಜಾರಿಯಾಗುವುದನ್ನು ಹಾಗೂ ಪಾವತಿ ಬೇಡಿಕೆ ಆರಂಭಿಸಿರುವ ಪ್ರಕರಣಗಳನ್ನು ತಡೆಹಿಡಿಯಲಾಗುವುದು.

2. ತಕ್ಷಣದಲ್ಲಿ ಆರ್ಥಿಕ ಪರಿಣಾಮ ಬೀರುವಂತಹ ಪ್ರಕರಣಗಳಿಗೆ ಮಾತ್ರ ತಡೆಹಿಡಿಯುವಿಕೆ ಅನ್ವಯಿಸುತ್ತದೆ. ಅಂತಹ Demand Notice/Penalty Notice ಗಳು ಸ್ಥಳೀಯ ಆದಾಯ ತೆರಿಗೆ ಅಧಿಕಾರಿಗಳಿಂದ ಜಾರಿಯಾದಲ್ಲಿ ಗಮನಕ್ಕೆ ತರುವುದು.

3. Faceless or Computerised Orders ಬಂದಿದ್ದಲ್ಲಿ, ಸ್ಥಳೀಯವಾಗಿ ಯಾವುದೇ ಪರಿಹಾರ ಸಾಧ್ಯವಾಗದ ಕಾರಣ ಸೌಹಾರ್ದ ಕಾಯ್ದೆ ತಿದ್ದುಪಡಿ & High Court Judgement ಮಾಹಿತಿಯನ್ನು ಒಳಗೊಂಡಂತೆ Income Tax Portal ಮೂಲಕ ಪ್ರತ್ಯುತ್ತರ (Reply) ಸಲ್ಲಿಸಬೇಕು.

4. ಇವನ್ನು ಹೊರತುಪಡಿಸಿದಂತೆ, ಮಾಹಿತಿ/ದಾಖಲಾತಿ ಸಂಗ್ರಹದ ನೋಟೀಸ್, ಪರಿಶೀಲನೆ ಮಾಡುವ ಪ್ರಕ್ರಿಯೆ, ವಿವರಣೆ ಅಪೇಕ್ಷಿಸುವ ನೋಟೀಸ್ ಇತ್ಯಾದಿಗಳು ನಿಯಮಿತವಾಗಿ ನಡೆಸಲೇಬೇಕಾದ ಕಾರ್ಯಗಳಾಗುವುದರಿಂದ ಅವು ಜಾರಿಯಲ್ಲಿರುತ್ತವೆ. ಅವುಗಳಿಗೆ ಸೂಕ್ತ ಪ್ರತಿಕ್ರಿಯೆ ನೀಡುವುದು.

**ಗಮನಕ್ಕೆ :** ತೆರಿಗೆ ವಸೂಲಿ ಪ್ರಕ್ರಿಯೆ ಜಾರಿಯಾದಲ್ಲಿ ಹಾಗೂ ಆದಾಯ ತೆರಿಗೆ ಇಲಾಖೆಯ ಸ್ಥಳೀಯ ಅಧಿಕಾರಿಗಳಿಂದ Demand/Penalty ನೋಟೀಸ್/ಆದೇಶಗಳು ಬಂದಲ್ಲಿ raghunandan@souharda.coop ಗೆ ಮೇಲ್ ಮೂಲಕ ಕಳುಹಿಸುವುದು.

ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರು, ಉದಯ ಸೌಹಾರ್ದ ಸಹಕಾರಿಯಿಂದ ಶ್ರೀ ಚಂದ್ರಶೇಕರ್ ರವರು, ಶ್ರೀ ಶ್ರೀಕಾಂತರವರು, ಆವತಿ ಸೌಹಾರ್ದ ಸಹಕಾರಿ ಹಾಗೂ ಬೆಂಗಳೂರು ಸಹಕಾರ ಭಾರತಿಯಿಂದ ಶ್ರೀ ಕುಮಾರ ಮೂರ್ತಿಯವರು, ನ್ಯಾಯವಾದಿಗಳು ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಶ್ರೀ ರವಿ ಶಂಕರರವರು, ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ Chief Commissioner of Income Tax ರವರಿಗೆ ವಿಜಯ ದಶಮಿ/ದಸರಾ ಹಬ್ಬದ ಶುಭಾಶಯಗಳನ್ನು ತಿಳಿಸುವುದರೊಂದಿಗೆ ಅಭಿನಂದನೆ ಸಲ್ಲಿಸಲಾಗಿದೆ.

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ 5ನೇ ವಾರ್ಷಿಕ ಸಾಮಾನ್ಯ ಸಭೆ



**ಬೆಂಗಳೂರು :** ದಿನಾಂಕ 29-10-2021 ರಂದು ಕರ್ನಾಟಕ ರಾಜ್ಯ ಶ್ರೀ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ 5ನೇ ವಾರ್ಷಿಕ ಸಾಮಾನ್ಯ ಸಭೆಯು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಗೆ ಮಾಜಿ ಸಹಕಾರ ಸಚಿವರೂ ಹಿರಿಯರು ಸುದ್ದಿ ಮಹಾಮಂಡಳದ ಸ್ಥಾಪನೆಯ ಮಹತ್ವಾಂಕಾಂಕ್ಷೆಯನ್ನು ಹೊಂದಿದ ಶ್ರೀ ಎಸ್.ಎಸ್. ಪಾಟೀಲರವರು ಭಾಗವಹಿಸಿ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮಹಾಮಂಡಳದ ಪ್ರಗತಿ ಸಮಾಧಾನಕರವಾಗಿರುವುದಿಲ್ಲವಾದರೂ ಕಾರ್ಯನಿರ್ವಹಿಸುತ್ತಿದೆ. ನಿಷ್ಕ್ರೀಯವಾಗಿಲ್ಲ. ಪದಾಧಿಕಾರಿಗಳು ಕರೋನಾ ಸೇರಿದಂತೆ ಹಲವು ಕಾರಣಗಳಿಂದ ಷೇರು ಬಂಡವಾಳ ಶೇಖರಣೆ ಸಾಧ್ಯವಾಗಿರುವುದಿಲ್ಲ. ಮುಂಬರುವ ದಿನಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಪ್ರಯತ್ನಮಾಡಿ ಸಹಕಾರ ಕ್ಷೇತ್ರದಲ್ಲಿ ಮೊಟ್ಟ ಮೊದಲ ಟಿ.ವಿ. ಪ್ರಾರಂಭಿಸಿದ ಕರ್ನಾಟಕದ್ದಾಗಲಿ ಎಂದು ಶುಭಕೋರಿದರು.

ಪ್ರಾರಂಭದಲ್ಲಿ ಶ್ರೀಮತಿ ಸಂಗೀತಾ ಕಾಖಂಡಕಿಯವರ ಪ್ರಾರ್ಥನೆಯಾದ ನಂತರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಸತೀಶರವರು ಸ್ವಾಗತ ಕೋರಿದರು. ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರ ರವರು ಅಧ್ಯಕ್ಷೀಯ ಭಾಷಣ ಮಾಡುತ್ತ ಕರೋನಾ ಸೇರಿದಂತೆ ಹಲವಾರು ಕಾರಣಗಳಿಂದ ಮಹಾಮಂಡಳದ ಪಾಲು ಬಂಡವಾಳ ಶೇಖರಣೆಯಲ್ಲಿ ವಿಳಂಬವಾಗುತ್ತಿದೆ. ಆದರೆ ಮಹಾಮಂಡಳ ಯೂ ಟ್ಯೂಬ್ ಸಹಕಾರ ಟಿ.ವಿ.ಚಾನೆಲ್ ಮೂಲಕ ಹಾಗೂ ಸಹಕಾರ ಸಿಂಚನ ಮಾಸಿಕ ಪತ್ರಿಕೆಯ

ಮೂಲಕ ಸದಸ್ಯರನ್ನು ಹಾಗೂ ಸಹಕಾರ ಕ್ಷೇತ್ರದ ಸೇವೆಯನ್ನು ಉತ್ತಮವಾಗಿಯೇ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಷೇರು ಬಂಡವಾಳ ಶೇಖರಣೆಗೆ ಎಲ್ಲ ನಿರ್ದೇಶಕರು ಹಾಗೂ ರಾಜ್ಯದ ಸಹಕಾರಿಗಳು ಸಹಕರಿಸಬೇಕೆಂದು ಕೋರಿದರು.

ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಸಾಮಾನ್ಯ ಸಭೆಯ ವಿಷಯಪಟ್ಟಿಯ ಅನುಕ್ರಮದಂತೆ ವಿಷಯಗಳನ್ನು ಮಂಡಿಸಿದರು. ಸುದೀರ್ಘ ಪ್ರಶ್ನೋತ್ತರಗಳ ನಂತರ ಅಧ್ಯಕ್ಷ ಭಾಷಣವಾದ ಮೇಲೆ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು.

# ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು

## ಸಂಪರ್ಕ ಸಭೆಗಳು



**ಬೆಳಗಾವಿ :** ದಿನಾಂಕ 22.10.2021 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಕಾಗವಾಡ, ಚಿಕ್ಕೋಡಿ, ನಿಪ್ಪಾಣಿ, ರಾಯಬಾಗ ಮತ್ತು ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಶ್ರೀ ಕೇಶವ ಕಲಾಭವನ, ಪುರಸಭೆ ಹಿಂಬಾಗ, ಚಿಕ್ಕೋಡಿಯಲ್ಲಿ ಸಂಪರ್ಕ ಸಭೆಯು ಜರುಗಿತು. ಸಂಪರ್ಕ ಸಭೆಯ ಪೂರ್ವದಲ್ಲಿ ಟಾಸ್ಕ್‌ಫೋರ್ಸ್‌ನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ರವರು ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ–2021 ವಿಷಯದ ಕುರಿತು ಉಪನ್ಯಾಸ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ಚಿಕ್ಕೋಡಿ ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಸಂಜಯ ಅಡಕೆ ಇವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಶ್ರೀ ರಮೇಶ ವೈದ್ಯ, ಮಾನ್ಯ ರಾಷ್ಟ್ರೀಯ ಅಧ್ಯಕ್ಷರು, ಸಹಕಾರ ಭಾರತಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ವಹಿಸಿದ್ದರು. ಅತಿಥಿಗಳಾಗಿ ಚಿಕ್ಕೋಡಿ ಪುರಸಭೆಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರವೀಣ ಕಾಂಬಳೆ ರವರು ವಹಿಸಿದ್ದರು.

ಟಾಸ್ಕಫೋರ್ಸನ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಸಭೆಯಲ್ಲಿ 327 ಸೌಹಾರ್ದ ಸಹಕಾ–ರಿಗಳಿಂದ 1086 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಗಳು ಸಕ್ರೀಯವಾಗಿ ಪಾಲ್ಗೊಂಡು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾನ್ಯ ಅಧ್ಯಕ್ಷರಿಂದ ಸಮರ್ಪಕವಾದ ಉತ್ತರಗಳನ್ನು ಪಡೆದುಕೊಂಡರು.



**ಬೆಳಗಾವಿ :** ದಿನಾಂಕ 23.10.2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲ ಹೊಂಗಲ್, ಖಾನಾಪುರ, ರಾಮದುರ್ಗ, ಸವದತ್ತಿ, ಗೋಕಾಕ, ಮೂಡಲಗಿ, ಚೆನ್ನಮ್ಮನ ಕಿತ್ತೂರ ಮತ್ತು ಯರಗಟ್ಟಿ, ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕೆ.ಪಿ.ಟಿ.ಸಿ.ಎಲ್ ಸಮುದಾಯ ಭವನ ಬೆಳಗಾವಿಯಲ್ಲಿ ಸಂಪರ್ಕ ಸಭೆಯು ಜರುಗಿತು.

ಸಂಪರ್ಕ ಸಭೆಯ ಪೂರ್ವದಲ್ಲಿ ಸಹಕಾರ ಅಭಿವೃದ್ಧಿ ಅಧಿಕಾರಿ ಬೆಳಗಾವಿಯವರಾದ ಶ್ರೀ ಶಂಕರ ಕರಬಸಣ್ಣವರ ರವರು ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ–2021 ವಿಷಯದ ಕುರಿತು ಉಪನ್ಯಾಸ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು.

ಸಭೆಯ ಉದ್ಘಾಟನೆಯನ್ನು ಶ್ರೀ ಮಹಾಂತೇಶ ಕವಟಗಿಮಠ, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ವಿಧಾನ ಪರಿಷತ್, ಬೆಂಗಳೂರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಅಣ್ಣಾಸಾಹೇಬ ಜೊಲ್ಲೆ, ಮಾನ್ಯ ಸಂಸದರು ಚಿಕ್ಕೋಡಿ ಲೋಕಸಭಾ ಮತಕ್ಷೇತ್ರ. ಶ್ರೀ ರಮೇಶ ವೈದ್ಯ, ಮಾನ್ಯ ರಾಷ್ಟ್ರೀಯ ಅಧ್ಯಕ್ಷರು, ಸಹಕಾರ ಭಾರತಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ವಹಿಸಿದ್ದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಸಭೆಯಲ್ಲಿ 376 ಸೌಹಾರ್ದ ಸಹಕಾರಿಗಳಿಂದ 876 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಸಭೆಯಲ್ಲಿ ಸಹಕಾರಿಗಳು ಸಕ್ರೀಯವಾಗಿ ಪಾಲ್ಗೊಂಡು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾನ್ಯ ಅಧ್ಯಕ್ಷರಿಂದ ಸಮರ್ಪಕವಾದ ಉತ್ತರಗಳನ್ನು ಪಡೆದುಕೊಂಡರು.




**ಬೆಂಗಳೂರು :** ದಿನಾಂಕ 18.10.2021 ರಂದು ಬೆಂಗಳೂರು ನಗರ(2&3ನೇ ವಲಯ) ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ನೆರವೇರಿಸಿದರು. ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ಇವರು ನಡೆಸಿಕೊಟ್ಟರು. ಸೌಹಾರ್ದ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದ ವಿಷಯಗಳ ಕುರಿತು ಶ್ರೀ ಹೆಚ್.ಎಸ್. ನಾಗರಾಜಯ್ಯ, ಅಪರ ನಿಬಂಧಕರು(ನಿವೃತ್ತ), ಬೆಂಗಳೂರು, ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ 63 ಸೌಹಾರ್ದ ಸಹಕಾರಿಗಳಿಂದ 91 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಂಗಳೂರು :** ದಿನಾಂಕ 21.10.2021 ರಂದು ಬೆಂಗಳೂರು ನಗರ (1 & 4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು /ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಹೋಟೆಲ್ ಕದಂಬ, ಡಾ.ಮೋದಿ ಆಸ್ಪತ್ರೆ ರಸ್ತೆ, (ರಾಜಾಜಿನಗರ ಮೆಟ್ರೋ ಸ್ಟೇಷನ್ ಹತ್ತಿರ)ರಾಜಾಜಿನಗರ, ಬೆಂಗಳೂರು ಇಲ್ಲಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ಇವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಇವರು ನೆರವೇರಿಸಿದರು. ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜ–ಕರಾದ ಶ್ರೀ ಅನಿಲ್ ಕುಮಾರ್ ಎಮ್. ಇವರು ನಡೆಸಿಕೊಟ್ಟರು. ಸೌಹಾರ್ದ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದ ವಿಷಯಗಳ ಕುರಿತು ಶ್ರೀ ಹೆಚ್.ಎಸ್. ನಾಗರಾಜಯ್ಯ, ಅಪರ ನಿಬಂಧಕರು (ನಿವೃತ್ತ), ಬೆಂಗಳೂರು, ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ 96 ಸೌಹಾರ್ದ ಸಹಕಾರಿಗಳಿಂದ 151 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿತ್ರದುರ್ಗ :** ದಿನಾಂಕ 26.10.2021 ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹೋಟೆಲ್ ಐಶ್ವರ್ಯ ಪೋರ್ಟ್, ಆರ್.ಟಿ.ಓ ಕಚೇರಿ ಹತ್ತಿರ, ತುರುವನೂರು ರೋಡ್, ಚಿತ್ರದುರ್ಗ ಜಿಲ್ಲೆ, ಇಲ್ಲಿ ಸಂಪರ್ಕ ಸಭೆ ಹಾಗೂ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳು ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಧಾನಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ರವರು ವಹಿಸಿದ್ದರು. ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಸೌಹಾರ್ದ ಕಾಯ್ದೆ ತಿದ್ದುಪಡಿಗಳ ಬಗ್ಗೆ ಮಾಹಿತಿ ನೀಡಿದರು. ಸೌಹಾರ್ದ ದಾವಾ ಪಂಚಾಯತ್ ನ್ಯಾಯಾಲಯದಲ್ಲಿ ದಾವೆ ಹೂಡುವ ಬಗ್ಗೆ ಶ್ರೀ ಶ್ರೀಧರ್ ಮಟವಳ್ಳಿ ರವರು ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರು ನೆರವೇರಿಸಿದರು. 45 ಸೌಹಾರ್ದ ಸಹಕಾರಿಗಳಿಂದ 105 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 27.10.2021 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹೋಟೆಲ್ ಅಶೋಕ ಇನ್, ಕೆ.ಎಸ್. ಆರ್.ಟಿ.ಸಿ ಬಸ್ ನಿಲ್ದಾಣದ ಹಿಂದೆ, ಪಿ.ಬಿ ರೋಡ್, ದಾವಣಗೆರೆ, ಇಲ್ಲಿ ಸಂಪರ್ಕ ಸಭೆ ಹಾಗೂ ಸೌಹಾರ್ದ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳು ಮತ್ತು ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ವಿಧಾನಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಎಮ್. ನಾಗರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ಇವರು ಆಗಮಿಸಿದ್ದರು. ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಸೌಹಾರ್ದ ಕಾಯ್ದೆ ತಿದ್ದುಪಡಿಗಳ ಬಗ್ಗೆ ಮಾಹಿತಿ ನೀಡಿದರು. ಸೌಹಾರ್ದ ದಾವಾ ಪಂಚಾಯತ್ ನ್ಯಾಯಾಲಯದಲ್ಲಿ ದಾವೆ ಹೂಡುವ ಬಗ್ಗೆ ಶ್ರೀ ಶ್ರೀಧರ್ ಮಟವಳ್ಳಿ ರವರು ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರು ನೆರವೇರಿಸಿದರು. 45 ಸೌಹಾರ್ದ ಸಹಕಾರಿಗಳಿಂದ 105 ಪ್ರತಿನಿಧಿಗಳು ಭಾಗವಹಿಸಿದ್ದರು.

## ಪತ್ರಿಕಾ ಗೋಷ್ಠಿ



**ಚಿತ್ರದುರ್ಗ :** ದಿನಾಂಕ 26.10.2021 ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಲಾಗಿದ್ದ ಸಂಪರ್ಕ ಸಭೆಯ ಮುನ್ನ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ ಇವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.



**ದಾವಣಗೆರೆ :** ದಿನಾಂಕ 27.10.2021 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಆಯೋಜಿಸಲಾಗಿದ್ದ ಸಂಪರ್ಕ ಸಭೆಯ ಮುನ್ನ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ನಂಜನಗೌಡ ಇವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.



**ಬೆಳಗಾವಿ :** ದಿನಾಂಕ 23.10.2021 ರಂದು ಹೋಟೆಲ್ ಸನ್ಮಾನ, ಬೆಳಗಾವಿ ಇಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಪತ್ರಿಕಾಗೋಷ್ಠಿಯು ಜರುಗಿತು. ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀಯುತ ಜಗದೀಶ ಕವಟಗಿಮಠ, ಸಹಕಾರ ಭಾರತಿಯ ಮಾನ್ಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀಯುತ ರಮೇಶ ವೈದ್ಯ, ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ, ಶ್ರೀ ಐ.ಬಿ. ಕೊಪ್ಪದ, ಅಧ್ಯಕ್ಷರು, ಶಿವಶಂಕರ ಸೌಹಾರ್ದ ಸಹಕಾರಿ ನಿ., ಶ್ರೀ ಪ್ರಶಾಂತ ಬಡವನಾಚ ಅಧ್ಯಕ್ಷರು, ಏಕಲಕ್ಷ್ಯ ಸೌಹಾರ್ದ ಸಹಕಾರಿ ನಿ., ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಪತ್ರಿಕಾಗೋಷ್ಠಿಯ ನಂತರದಲ್ಲಿ ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿ 05 ಸಮಸ್ಯಾತ್ಮಕ ಸಹಕಾರಿಗಳೊಂದಿಗೆ ಸಭೆ ಜರುಗಿತು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಬೆಳಗಾವಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಚಿಕ್ಕೋಡಿ, ಶ್ರೀ ಪ್ರಭುದೇವ ಕ್ರೆಡಿಟ್ ಸೌಹಾರ್ದ ಸಹಕಾರಿ ಚಿಕ್ಕೋಡಿ ಮತ್ತು ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ಚಿಕ್ಕೋಡಿ ಸಹಕಾರಿಗಳಿಗೆ ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ ರವರು, ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು, ಸಂಯುಕ್ತ ಸಹಕಾರಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ್ ಕವಟಗಿಮಠ ರವರು ಮತ್ತು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ರವರು ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು.



**ಬೆಂಗಳೂರು :** ದಿನಾಂಕ 02.10.2021 ರಂದು ಕುರುಹಿನ ಶೆಟ್ಟಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಸಹಕಾರಿಯ ನಿರ್ದೇಶಕರ ಸಭೆಯಲ್ಲಿ ಭಾಗವಹಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಸದರಿ ಸಹಕಾರಿಯ ವತಿಯಿಂದ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.

**ಯಾದಗಿರಿ :** ದಿನಾಂಕ 22–10–2021ರ ಶುಕ್ರವಾರ ಸುರಪುರ ನಗರದ ಸಾಯಿ ಸೌಹಾರ್ದ ಪತ್ತಿನ ಸಹಕಾರಿ ನಿ., ಸುರಪುರ ಜಿ॥ ಯಾದಗಿರಿ ಇದಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಾಯ್.ಟಿ. ಪಾಟೀಲ್ ಭೇಟಿ ನೀಡಿ ಸಹಕಾರಿಯ ಕಾರ್ಯ ಚಟುವಟಿ–ಕೆಯ ಕುರಿತು ಮಾಹಿತಿ ಪಡೆದರು. ಸಹಕಾರಿಯ ಬೆಳವಣಿಗೆಗೆ ಪೂರಕ ಮಾರ್ಗದರ್ಶನ ಸಲಹೆಗಳನ್ನು ನೀಡಿದರು ಇದೇ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಮಾನ್ಯ ನಿರ್ದೇಶಕರಿಗೆ ಹಾಗೂ ಪ್ರಾಂತೀಯ ವ್ಯವಸ್ಥಾಪಕರಿಗೆ ಸನ್ಮಾನಿಸಲಾಯಿತ್ತು. ಸಹಕಾರಿಯ ಭೇಟಿಯ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ರಂಗಪ್ಪ ನಾಯಕ ಪಾಪಲಿ, ನಿರ್ದೇಶಕರಾದ ಕೋಟ್ರಯ್ಯ ಸ್ವಾಮಿ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್. ಮುಖ್ಯ ಕಾರ್ಯನಿರ್ವಾಹಕ ಕೊಟ್ರೇಶ ಬಿ ಹಿರೇಮಠ, ಸಿಬ್ಬಂದಿಗಳಾದ ಶ್ರೀ ಬಸಣ್ಣ ನಾಯಕೊಡಿ, ರಾಮಣ್ಣಾ ಬಾಗಲಿ ಜಿಲ್ಲಾ ಸಂಯೋಜಕ ವೀರಶೆಟ್ಟಿ ಉಪಸ್ಥಿತರಿದ್ದರು.

ಸುವರ್ಣ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಶಹಪುರ ಸಹಕಾರಿಗೆ ಮಾನ್ಯ ನಿರ್ದೇಶಕರಾದ ಶ್ರೀ ವಾಯ್.ಟಿ. ಪಾಟೀಲ್ ಭೇಟಿ ನೀಡಿದರು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಸವರಾಜ ಇವರಿಗೆ ಸಹಕಾರಿಯ ಲೆಕ್ಕ ಪರಿಶೋಧನೆ ಕುರಿತು ಹಾಗೂ ಸಾಲ ವಸೂಲಾತಿಯ ಕುರಿತು ಮಾರ್ಗದರ್ಶನ ನೀಡಿದರು.



**ಬೆಳಗಾವಿ :** ಹಾಸನ ಜಿಲ್ಲೆಗೆ ಜಂಟಿ ನಿರ್ದೇಶಕರ ಹುದ್ದೆಗೆ ವರ್ಗಾವಣೆಗೊಂಡ ಶ್ರೀ ಸುರೇಶರಾವ, ಇವರನ್ನು ಮಾನ್ಯ ಟಾಸ್ಕಫೋರ್ಸನ ಉಸ್ತುವಾರಿಗಳಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀ ಬಸವರಾಜ ಹೊಂಗಲ ಇವರು ಶ್ರೀಯುತರನ್ನು ಸನ್ಮಾನಿಸಿದರು.



**ಬೆಳಗಾವಿ :** ಶ್ರೀ ಹೆಚ್.ಸಿ. ಬಸವರಾಜ, ಮಾನ್ಯ ಸಹಕಾರಿಗಳ ಜಂಟಿ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ, ಬೆಳಗಾವಿ ಇವರು ನೂತನವಾಗಿ ಪ್ರಭಾರ ವಹಿಸಿಕೊಂಡರು. ಶ್ರೀಯುತರಿಗೆ ಮಾನ್ಯ ಟಾಸ್ಕಫೋರ್ಸನ ಉಸ್ತುವಾರಿಗಳಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪರಾದ ಶ್ರೀ ಬಸವರಾಜ ಹೊಂಗಲ ಇವರು ಪುಷ್ಪ ಗುಚ್ಛ ನೀಡುವುದರ ಮೂಲಕ ಸ್ವಾಗತಿಸಿದರು.

# ಸಂಯುಕ್ತ ಸಹಕಾರಿಯ ಶಾನಸಬದ್ಧ ಕಾರ್ಯಗಳು

## ಅಹನಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಹೊಸಪೇಟೆ,

ಸಹಕಾರಿಯ ಆಡಳಿತ ಮಂಡಲಿ ಸದಸ್ಯರುಗಳು ಅಧಿಕಾರ ದುರುಪಯೋಗಪಡಿಸಿಕೊಂಡು ಠೇವಣಿದಾರರಿಗೆ ಮೋಸ/ವಂಚನೆ ಎಸಗಿರುವ ಹಿನ್ನಲೆಯಲ್ಲಿ ಹಾಗೂ ಹಲವು ಠೇವಣಿದಾರರು ತಮ್ಮ ಠೇವಣಿ ಹಣವನ್ನು ಮರಳಿ ನೀಡುತ್ತಿಲ್ಲವೇಂದು ಸಂಯುಕ್ತ ಸಹಕಾರಿಗೆ ಹಾಗೂ ಸಹಕಾರಿಗಳ ನಿಬಂಧಕರ ಕಛೇರಿಗೆ ದೂರುಗಳು ಸ್ವೀಕೃತಿಯಾಗಿರುವುದರಿಂದ ಹಾಗೂ ಪರಿವೀಕ್ಷಣಾ ವರದಿಯಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಅವ್ಯವಹಾರ ನಡೆಸಿರುವುದಾಗಿ ವರದಿಸಿರುವ ಹಿನ್ನಲೆಯಲ್ಲಿ ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ. ಇದರ 17 (ಹದಿನೇಳು) ಜನ ನಿರ್ದೇಶಕರುಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 25(4) ರಡಿ ಕಾರಣ ಕೇಳಿ ನೋಟಿಸ್‌ನ್ನು ನೀಡಲಾಗಿತ್ತು, ಸದರಿ ಕಾರಣ ಕೇಳಿ ನೋಟೀಸ್‌ಗೆ ಕೆಲವು ನಿರ್ದೇಶಕರು ಸಮಜಾಯಿಷಿ ನೀಡಿದ್ದು ಸದರಿ ಸಮಜಾಯಿಷಿ ಸಮಂಜಸವಾಗಿರದ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(2)(ಎ–2)ರ ಪ್ರಾವದಾನದಂತೆ ಹಾಗೂ ಸದರಿ ಅಧಿನಿಯಮದ ಕಲಂ 25(1)(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ. ಇದರ 17 (ಹದಿನೇಳು) ಜನ ಆಡಳಿತ ಮಂಡಲಿಯ ಸದಸ್ಯರನ್ನು ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ. ಸಹಕಾರಿಯ ಆಡಳಿತ ಮಂಡಲಿಯ ಸದಸ್ಯತ್ವದಿಂದ ದಿನಾಂಕ 21.10.2021 ರಿಂದ ಮುಂದಿನ ಐದು ವರ್ಷಗಳ ಅವಧಿಯವರೆಗೆ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯದಂತೆ ಅನರ್ಹಗೊಳಿಸಿ ಆದೇಶ ಮಾಡಲಾಗಿರುತ್ತದೆ. ಹಾಗೂ ದಿನಾಂಕ 21.10.2021 ರಂದು ಶ್ರೀ ಆರ್. ಬಸವರಾಜ್, ಮುಖ್ಯ ಕಾರ್ಯ ನಿರ್ವಹಕರು (ನಿವೃತ್ತ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ನಿ., ಇವರನ್ನು ಸಹಕಾರಿಯ ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ.



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ 441 ದಾವಾ ಪಂಚಾಯತ ನ್ಯಾಯಾಲಯ ಬೆಳಗಾವಿ ಪೀಠಕ್ಕೆ ನೂತನ ಪೀಠಾಧಿಕಾರಿಗಳಾಗಿ ಶ್ರೀ ಜಿ.ಎಮ್.ಪಾಟೀಲ, ಮಾನ್ಯ ಸಹಕಾರಿ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ಇವರು ಪ್ರಭಾರ ವಹಿಸಿಕೊಂಡಿರುತ್ತಾರೆ ಹಾಗೂ ಮಾನ್ಯರನ್ನು ದಿನಾಂಕ 25.10.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ. ಕವಟಗಿಮಠ ಇವರು ಸನ್ಮಾನಿಸಿದರು



**ಬೆಂಗಳೂರು :** ದಿನಾಂಕ 25.10.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ 441 ದಾವಾ ಪಂಚಾಯತ ನ್ಯಾಯಾಲಯ ಬೆಂಗಳೂರು ಪೀಠಕ್ಕೆ ನೂತನ ಪೀಠಾಧಿಕಾರಿಗಳಾಗಿ ಶ್ರೀ ಪಿ ಶಶಿಧರ ಮಾನ್ಯ ಸಹಕಾರಿ ಸಂಘಗಳ ಉಪ ನಿಬಂಧಕರು ಬೆಂಗಳೂರು ಇವರು ಪ್ರಭಾರ ವಹಿಸಿಕೊಂಡಿರುತ್ತಾರೆ ಹಾಗೂ ಮಾನ್ಯರನ್ನು ಕಛೇರಿಯಲ್ಲಿ ಸಹಾಯಕ ನಿಬಂಧಕರಾದ ಬಿ.ಪಿ.ಪ್ರೇಮಾನಂದ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಸನ್ಮಾನಿಸಿದರು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಪೀಠಾಧಿಕಾರಿ ಬದಲಾವಣೆ ಬೆಳಗಾವಿ ಪೀಠಕ್ಕೆ ಬೆಳಗಾವಿ ಪ್ರಾಂತ್ಯ ಜಂಟಿ ನಿಬಂಧಕರ ನೇಮಕ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯಕ್ಕೆ ಪೀಠಾಧಿಕಾರಿಯಾಗಿದ್ದ ಉಪನಿಬಂಧಕರು, 4ನೇ ವಲಯ, ಬೆಂಗಳೂರು ಇವರನ್ನು ಬದಲಾಯಿಸಿ ಶ್ರೀ ಶಶಿಧರ, ಉಪನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಅಧಿಕ ಪ್ರಭಾರದಲ್ಲಿ ನೇಮಕ ಮಾಡಲಾಗಿದೆ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಬೆಳಗಾವಿ ಪೀಠಕ್ಕೆ ಬೆಳಗಾವಿ ಪ್ರಾಂತದ ಜಂಟಿ ನಿಬಂಧಕರನ್ನು ಅಧಿಕ ಪ್ರಭಾರದಲ್ಲಿ ನೇಮಕ ಮಾಡಲಾಗಿದೆ. ಈ ಮೊದಲು ಬೆಂಗಳೂರು ಪೀಠಾಧಿಕಾರಿಗಳೇ ಬೆಳಗಾವಿ ಪೀಠದ ದಾವೆಗಳನ್ನು ನಡೆಸಬೇಕಿತ್ತು, ಇದರಿಂದ ಪೀಠಾಧಿಕಾರಿಗಳ ಕಾರ್ಯದೊತ್ತಡ ಹೆಚ್ಚುತ್ತಿತ್ತು ಹಾಗೂ ದಾವಾ ವಿಲೇವಾರಿಯಲ್ಲಿ ನಿಯಮಿತ ಮೇಲ್ವಿಚಾರಣೆ ತೊಡಕಾಗುತ್ತಿತ್ತು. ಬೆಳಗಾವಿ ಪೀಠಕ್ಕೆ ಪ್ರತ್ಯೇಕ ಪೀಠಾಧಿಕಾರಿ ನೇಮಕದ ಅಗತ್ಯತೆಯ ಬಗ್ಗೆ ಸೌಹಾರ್ದ ಸಹಕಾರಿಗಳು ಕೋರಿದ್ದವು. ಈ ಬಗ್ಗೆ ಸಂಯುಕ್ತ ಸಹಕಾರಿ ನಿರಂತರವಾಗಿ ಪ್ರಯತ್ನ ನಡೆಸಿತ್ತು. ಪ್ರಸ್ತುತ ಬೆಳಗಾವಿ ಪೀಠಕ್ಕೆ ಶ್ರೀ ಪಾಟೀಲ ಜಿ. ಎಂ , ಜಂಟಿ ನಿಬಂಧಕರನ್ನು ಅಧಿಕ ಪ್ರಭಾರದಲ್ಲಿ ಪೀಠಾಧಿಕಾರಿಗಳನ್ನಾಗಿ ನೇಮಕ ಮಾಡಿರುವುದು ಸೌಹಾರ್ದ ಸಹಕಾರಿಗಳಿಗೆ ಸಂತಸದ ವಿಷಯವಾಗಿದೆ.

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2021ನೇ ಸಾಲಿನಲ್ಲಿ ಮಾಡಲಾದ ತಿದ್ದುಪಡಿಯ ಅಂಶಗಳು

– ಶ್ರೀ ಶ್ರೀಕಾಂತ್ ಬರುವೆ, ಉಪ ಪ್ರಧಾನ ವ್ಯವಸ್ಥಾಪಕ, ಟಾಸ್ಕ್‌ಫೋರ್ಸ್, ಬೆಳಗಾವಿ & ಕಲಬುರಗಿ ಪ್ರಾಂತ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಇದು ದಿನಾಂಕ 01 ಜನವರಿ 2000ರಂದು ಜಾರಿಗೆ ಬಂದಿದ್ದು, ಈ ಕಾಯ್ದೆಗೆ 2004, 2005, 2013, 2014, 2017 ಹಾಗೂ 2021ನೇ ಇಸವಿಗಳಲ್ಲಿ ತಿದ್ದುಪಡಿಯಾಗಿರುತ್ತದೆ. ಪ್ರಸ್ತುತ 2021ನೇ ಸಾಲಿನಲ್ಲಿ ಮಾಡಲಾದ ತಿದ್ದುಪಡಿಗಳು ದಿನಾಂಕ 07 ಅಕ್ಟೋಬರ್ 2021 ರಿಂದ ಜಾರಿಗೆ ಬಂದಿರುತ್ತದೆ. ಸದರಿ ತಿದ್ದಪಡಿಯ ಅಂಶಗಳು ಕೆಳಕಂಡಂತಿವೆ.

**1. ಕಾರ್ಯವ್ಯಾಪ್ತಿಯ ಪರಿಭಾಷೆ : (ಕಲಂ 2(ಎ1))**

ತಿದ್ದುಪಡಿಗೂ ಪೂರ್ವದಲ್ಲಿ ಪ್ರದೇಶದಿಂದ ಸಹಕಾರಿಯ ಸದಸ್ಯರನ್ನು ಸೇರಿಸಿಕೊಳ್ಳಬಹುದಾಗಿತ್ತೋ ಅಂತಹ ಅಥವಾ ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತಹ ಅಧಿಕಾರ ವ್ಯಾಪ್ತಿಯ ಪ್ರದೇಶ ಎಂಬ ಪರಿಭಾಷೆ ನೀಡಲಾಗಿತ್ತು. ಆದರೆ ಪ್ರಸ್ತುತ ಇದನ್ನು ಸರಳೀಕರಿಸಿ ಸಹಕಾರಿಗಳ ನೋಂದಾಯಿತ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರ ವ್ಯಾಪ್ತಿಯ ಪ್ರದೇಶ ಎಂಬುದಾಗಿ ಪರಿಭಾಷಿಸಲಾಗಿರುತ್ತದೆ.

**2. ಸಹಕಾರಿಯ ಪರಿಭಾಷೆ: (ಕಲಂ 2(ಇ))**

ತಿದ್ದುಪಡಿಗೂ ಪೂರ್ವದಲ್ಲಿ 'ಸಹಕಾರಿ' ಅಥವಾ 'ಸೌಹಾರ್ದ ಸಹಕಾರಿ' ಎಂದಿರುವುದನ್ನು 'ಸೌಹಾರ್ದ ಸಹಕಾರಿ ಸಂಘ' ಎಂಬುದಾಗಿ ತಿದ್ದುಪಡಿ ಮಾಡಲಾಗಿದೆ ಮತ್ತು ಕೇಂದ್ರ ಶಾಸನಗಳಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಸಹಕಾರ ಸಂಘವೆಂದು ಪರಿಗಣಿಸಲಾಗಿರುತ್ತದೆ.

ಆದಾಯ ತೆರಿಗೆ ಅಧಿಕಾರಿಗಳು ಸೌಹಾರ್ದ ಸಹಕಾರಿ ಹೆಸರಿನಲ್ಲಿ 'ಸಂಘ' ಎಂಬ ಪದ ಇಲ್ಲದ ಕಾರಣ ಸೌಹಾರ್ದ ಸಹಕಾರಿಗಳನ್ನು ಸಹಕಾರ ಸಂಘಗಳೆಂದು ಪರಿಗಣಿಸದೇ ಆದಾಯ ತೆರಿಗೆ ಕಲಂ, 1961ರ ಕಲಂ 80ಪಿ ರಡಿಯ ಕಡಿತವನ್ನು ನಿರಾಕರಿಸಿ ನೋಟೀಸ್ ನೀಡುತ್ತಿದ್ದ ಹಿನ್ನೆಲೆಯಲ್ಲಿ ಈ ತಿದ್ದುಪಡಿ ತರಲಾಗಿರುತ್ತದೆ. ಗಮನಾರ್ಹ ಅಂಶವೆಂದರೆ ಈ ತಿದ್ದುಪಡಿಯಲ್ಲಿ 'ಸೌಹಾರ್ದ ಸಹಕಾರ ಸಂಘ'ವೆಂಬ ಅಂಶವು ಈ ಹಿಂದೆಯೂ ಇದೆ ಎಂಬಂತೆ ಭಾವಿಸತಕ್ಕದ್ದು ಎಂದು ಹೇಳಲಾಗಿರುತ್ತದೆ.

**3. ರಿಜಿಸ್ಟ್ರಾರ್ ಸಂಯುಕ್ತ ಸಹಕಾರಿಗೆ ನೋಂದಾಯಿತ ಸಹಕಾರಿಯ ಪ್ರವರ್ತಕರ ವಿವರ ಸಲ್ಲಿಸುವುದು : (ಕಲಂ 5(3))**

ತಿದ್ದುಪಡಿಗೂ ಪೂರ್ವದಲ್ಲಿ ಸಂಬಂಧಪಟ್ಟ ರಿಜಿಸ್ಟ್ರಾರ್ ನೋಂದಣಿ ಪ್ರಮಾಣ ಪತ್ರದ ಪ್ರತಿ ಮತ್ತು ಉಪವಿಧಿಯ ಪ್ರತಿಯನ್ನು ಕಳುಹಿಸಬೇಕಿತ್ತು. ಆದರೆ ಪ್ರಸ್ತುತ ತಿದ್ದುಪಡಿಯಲ್ಲಿ ನೋಂದಣಿ ನಂತರ 60 ದಿನಗಳ ಒಳಗೆ ರಿಜಿಸ್ಟ್ರಾರ್‌ನು ನೋಂದಣಿ ಪ್ರಮಾಣ ಪತ್ರದ ಪ್ರತಿ, ಉಪವಿಧಿಯ ಪ್ರತಿ ಹಾಗೂ ಪ್ರವರ್ತಕರ ವಿವರಗಳನ್ನೂ ಸಂಯುಕ್ತ ಸಹಕಾರಿಗೆ ಕಳುಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

**4. ಸಂಘಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಠೇವಣಿ ಸ್ವೀಕಾರಕ್ಕೆ ನಿಷೇಧ : (ಕಲಂ 17)**

ಸೌಹಾರ್ದ ಸಹಕಾರಿಗಳು ಸಂಘಗಳಿಂದ ಮತ್ತು ಯಾವುದೇ ಹಣಕಾಸು ಸಂಸ್ಥೆಗಳಿಂದ ಠೇವಣಿ ಸ್ವೀಕರಿಸುವುದನ್ನು ಈ ಕಲಂ ನಿಷೇಧಿಸುತ್ತದೆ.

**5. ಸದಸ್ಯ ಶೇರುಗಳನ್ನು ಹೊಂದುವುದರ ಮೇಲೆ ಮಿತಿ: (ಕಲಂ 17ಎ)**

ಸಹಕಾರಿಯ ಓರ್ವ ಸದಸ್ಯ ಸಹಕಾರಿಯ ಒಟ್ಟು ಶೇರು ಬಂಡವಾಳದ ಶೇ.5 ಕ್ಕಿಂತ ಹೆಚ್ಚಿನ ಶೇರುಗಳನ್ನು ಹೊಂದಲು ಅವಕಾಶವಿರುವುದಿಲ್ಲ. ಈ ಹಿಂದೆ ಆಯಾ ಸಹಕಾರಿಗಳು ತಮ್ಮ ಉಪವಿಧಿಯಲ್ಲಿ ಓರ್ವ ಸದಸ್ಯ ಹೊಂದಬಹುದಾದ ಗರಿಷ್ಠ ಶೇರುಗಳ ಸಂಖ್ಯೆಯನ್ನು ನಿಗದಿಪಡಿಸಲು ಅವಕಾಶವಿತ್ತು. ಆದರೆ ಪ್ರಸ್ತುತ ಕಾಯ್ದೆಯಲ್ಲಿ ನಿರ್ಬಂಧ ವಿಧಿಸಲಾಗಿದೆ. (ಉದಾ : ಒಂದು ಸಹಕಾರಿಯ ಪಾವತಿಯಾದ ಶೇರು ಬಂಡವಾಳ ರೂ.10,00,000/– ವಾಗಿದ್ದರೆ ಇದರ ಶೇ.5 ಪ್ರತಿಶತ ಅಂದರೆ ಗರಿಷ್ಠ ರೂ.50,000/– ದಷ್ಟು ಮೊತ್ತದ ಶೇರುಗಳನ್ನು ಮಾತ್ರ ಹೊಂದಲು ಅವಕಾಶವಿರುತ್ತದೆ)

**6. ಸದಸ್ಯತ್ವನಾಗಿ ಸೇರಿಸಿಕೊಳ್ಳಲು ಮತ್ತು ಮುಂದುವರೆಯಲು ಅನರ್ಹತೆ: (ಕಲಂ 20)**

ಸಹಕಾರಿಯ ಸದಸ್ಯನಾಗಿ ಸೇರಿಸಿಕೊಳ್ಳಲು ಮತ್ತು ಮುಂದುವರೆಯಲು ಈ ಹಿಂದೆ ಬೇರೆ–ಬೇರೆಯಾಗಿ ಇದ್ದ ಪ್ರಾವಧಾನವನ್ನು (ಕಲಂನ್ನು) ಒಗ್ಗೂಡಿಸಿ ಈ ಹಿಂದಿನ ಪ್ರಾವಧಾನದ ಜೊತೆಗೆ ದಿವಾಳಿಯಾಗಿದ್ದರೆ, ಸಹಕಾರಿಯ ಅಥವಾ ಹಣಕಾಸು ಬ್ಯಾಂಕಿನ ಅಥವಾ ಸಂಯುಕ್ತ ಸಹಕಾರಿಯ ಉದ್ಯೋಗಿಯಾಗಿದ್ದರೆ ಸದಸ್ಯನಾಗಿ ಸೇರಿಸಿಕೊಳ್ಳಲು ಮತ್ತು ಮುಂದುವರೆಯಲು ಅನರ್ಹರಾಗಿರುತ್ತಾರೆ ಎಂಬ ಅಂಶವನ್ನು ಸೇರಿಸಲಾಗಿದೆ.

**7. ಮತದಾನದ ಮಾಡಲು ಮತ್ತು ಮಹಾಸಭೆಯಲ್ಲಿ ಭಾಗವಹಿಸಲು ಅನರ್ಹತೆ: (ಕಲಂ 20ಬಿ)**

ತಿದ್ದುಪಡಿಗೂ ಪೂರ್ವದಲ್ಲಿ ಸತತ ಮೂರು ವಾರ್ಷಿಕ ಸಾಮಾನ್ಯ ಸಭೆಗೆ ಅನಧಿಕೃತವಾಗಿ ಗೈರು ಹಾಜರಾದರೆ, ಸತತ ಎರಡು ವರ್ಷಗಳ ಅವಧಿಗೆ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ವ್ಯವಹಾರ ಮಾಡಿರದಿದ್ದರೆ ಮತ್ತು ಸಹಕಾರಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಪಾವತಿಸಲು ವಿಫಲನಾದ ಸದಸ್ಯನನ್ನು ಸದಸ್ಯತ್ವದಿಂದಲೇ ಅನರ್ಹಗೊಳಿಸಬೇಕಿತ್ತು. ಆದರೆ ಪ್ರಸ್ತುತ ತಿದ್ದುಪಡಿಯಲ್ಲಿ ಸಹಕಾರಿಯ ಯಾವುದೇ ಬಾಕಿಗಳಿಗೆ ಸುಸ್ತಿದಾರನಾಗಿದ್ದರೆ, ಹಿಂದಿನ ಐದು ಮಹಾಸಭೆಗಳ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಹಾಗೂ ಹಿಂದಿನ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಂತಹ ಸದಸ್ಯನು ಸಹಕಾರಿಯ

ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿಯ ಚುನಾವಣೆಯಲ್ಲಿ ಮತದಾನ ಮಾಡಲು ಮುಂದಿನ ಒಂದು ವರ್ಷದವರೆಗೆ ಅನರ್ಹಗೊಳಿಸಬೇಕಿರುತ್ತದೆ.

ಇಲ್ಲಿ ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ ಗೈರು ಹಾಜರಿಗೆ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿ ಪಡೆದುಕೊಳ್ಳಲು ಅವಕಾಶವಿರುವುದಿಲ್ಲ. ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಯಾವುದಾದರೂ ಎರಡು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ.

### 8. ಸಂಯುಕ್ತ ಸಹಕಾರಿಯ ನಿರ್ದೇಶಕನು ತಾನು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗದಿದ್ದಲ್ಲಿ, ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಮುಂದುವರೆಯಲು ಅನರ್ಹತೆ: (ಕಲಂ 24 & 28)

ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿರುವ ವ್ಯಕ್ತಿಯು ತಾನು ಯಾವ ಸದಸ್ಯ ಸಹಕಾರಿಯ ವತಿಯಿಂದ ಡೆಲಿಗೇಟ್ ಆಗಿರುತ್ತಾನೋ ಅಂತಹ ಸಹಕಾರಿಯ ಚುನಾವಣೆಯಲ್ಲಿ ನಿರ್ದೇಶಕನಾಗಿ ಚುನಾಯಿತನಾಗದಿದ್ದರೆ/ಪುನರ್ ಆಯ್ಕೆಯಾಗದಿದ್ದರೆ ಸಂಯುಕ್ತ ಸಹಕಾರಿಯಲ್ಲಿ ನಿರ್ದೇಶಕನಾಗಿ ಮುಂದುವರೆಯಲು ಅನರ್ಹನಾಗುತ್ತಾನೆ.

### 9. ಸಹಕಾರಿಯ ನಿರ್ದೇಶಕ ಸ್ಥಾನಕ್ಕೆ ಅನರ್ಹತೆ: (ಕಲಂ 25 (1)(ಇ))

ತಿದ್ದುಪಡಿಗೂ ಪೂರ್ವದಲ್ಲಿ ಸಹಕಾರಿಯ ನಿರ್ದೇಶಕನು ತಾನು ನಿರ್ದೇಶಕನಾಗಿ ಆಯ್ಕೆಯಾಗಿರುವ ಸಹಕಾರಿಯಲ್ಲಿ ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರುಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ ಅನರ್ಹತೆಗೆ ಗುರಿಯಾಗುತ್ತಿದ್ದರು. ಆದರೆ ಪ್ರಸ್ತುತ ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರುಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ ಅನರ್ಹತೆಗೆ ಒಳಗಾಗುತ್ತಾನೆ.

ಅದೇ ರೀತಿ ಸಹಕಾರಿಯ ನಿರ್ದೇಶಕನು ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡರೆ, ಕಲಂ 34ರಡಿಯ ವಿದ್ಯುಕ್ತ ವರದಿಗಳನ್ನು ಸಲ್ಲಿಸದಿದ್ದರೆ, ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಗಳನ್ನು ಎಸಗಿದರೆ, ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುದೇ ಅನರ್ಹತೆಗೆ ಗುರಿಯಾದರೆ, ಆಡಳಿತ ಮಂಡಲಿ ಸಭೆಗೆ ಅನುಮತಿ ಪಡೆದುಕೊಳ್ಳದೆ ಗೈರು ಹಾಜರಾದರೆ, ನೈತಿಕ ಅಧಃಪತನಕ್ಕಾಗಿ/ ಈ ಅಧಿನಿಯಮದಡಿಯಲ್ಲಿ ನಿರ್ಣಿತ ಅಪರಾಧಿಯಾದರೆ ಅಂತಹ ನಿರ್ದೇಶಕನು ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕನಾಗಿ ಚುನಾಯಿತರಾಗಲು ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರುತ್ತಾರೆ.

### 10. ಸಹಕಾರಿಯ ಸಿಬ್ಬಂದಿಗಳ ಮುಂಬಡ್ತಿಗೆ ಷರತ್ತು: ಕಲಂ 31(1ಎ)

ಸಹಕಾರಿಯ ನೌಕರನು ಮೇಲಿನ ಹುದ್ದೆಗೆ ಬಡ್ತಿಯನ್ನು ಪಡೆಯಲು ಸಂಯುಕ್ತ ಸಹಕಾರಿ ನಡೆಸುವ ಕೋರ್ಸ್‌ನ್ನು ಕಡ್ಡಾಯವಾಗಿ ಯಶಸ್ವಿಯಾಗಿ ಪೂರ್ಣಗೊಳಿಸಬೇಕಿರುತ್ತದೆ.

### 11. ಸ್ವಯಂಪ್ರೇರಿತ ವಿಚಾರಣೆಗೆ ನಿರ್ಬಂಧ: (ಕಲಂ 35)

ತಿದ್ದುಪಡಿಗೂ ಪೂರ್ವದಲ್ಲಿ ರಿಜಿಸ್ಟ್ರಾರನು ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಸ್ವಯಂ ಪ್ರೇರಿತ ವಿಚಾರಣೆ ನಡೆಸಲು ಅವಕಾಶವಿತ್ತು. ಆದರೆ ಪ್ರಸ್ತುತ ಸಹಕಾರಿಯ ಒಟ್ಟು ಸದಸ್ಯರ ಹತ್ತನೇ ಒಂದರಷ್ಟು ಅಥವಾ ಸಹಕಾರಿಯ ಕನಿಷ್ಠ ಹತ್ತು ಸದಸ್ಯರ ಕೋರಿಕೆ ಮೇರೆಗೆ ರಿಜಿಸ್ಟ್ರಾರನು ವಿಚಾರಣೆ ನಡೆಸಬಹುದಾಗಿರುತ್ತದೆ.

### 12. ಸಹಕಾರಿಯ ಸಮಾಪನೆಗೆ ಕಾಲಮಿತಿ ನಿಗದಿ: (ಕಲಂ 49)

ತಿದ್ದುಪಡಿಗೂ ಪೂರ್ವದಲ್ಲಿ ಸಹಕಾರಿಯ ಸಮಾಪನೆಗೆ ಕಾಲಮಿತಿ ಇರಲಿಲ್ಲ. ಪ್ರಸ್ತುತ ಸಹಕಾರಿಯ ಸಮಾಪನೆಯನ್ನು ಎರಡು ವರ್ಷಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು, ಆದಾಗ್ಯೂ ರಿಜಿಸ್ಟ್ರಾರನು ಕಾಲಾವಕಾಶವನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ. ಅಲ್ಲದೇ ಇನ್ನೂ ಹೆಚ್ಚಿನ ಸಮಯಾವಕಾಶದ ಅವಶ್ಯಕತೆ ಇದ್ದರೆ ರಾಜ್ಯ ಸರ್ಕಾರವು ನೈಜ ಕಾರಣಗಳ ಆಧಾರದ ಮೇಲೆ ಅವಧಿಯನ್ನು ವಿಸ್ತರಿಸಬಹುದಾಗಿರುತ್ತದೆ.

### 13. ಸಂಯುಕ್ತ ಸಹಕಾರಿಗೆ ಡೆಲಿಗೇಟ್ ಆಯ್ಕೆ: (ಕಲಂ 53(9))

ತಿದ್ದುಪಡಿಗೂ ಪೂರ್ವದಲ್ಲಿ ಸಹಕಾರಿಯ ಅಧ್ಯಕ್ಷ ಅಥವಾ ಸಭಾಪತಿಯು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದ ಡೆಲಿಗೇಟ್ ಆಗಿದ್ದು, ಯಾವುದೇ ಕಾರಣಕ್ಕಾಗಿ ಸಭಾಪತಿ ಅಥವಾ ಅಧ್ಯಕ್ಷನು ಪ್ರತಿನಿಧಿಸಲು ಅಸಮರ್ಥನಾದರೆ, ಆತನು ಮಂಡಲಿಯ ಯಾರೇ ನಿರ್ದೇಶಕನನ್ನು ಡೆಲಿಗೇಟ್ ಆಗಿರಲು ನಾಮನಿರ್ದೇಶಿಸಬಹುದಾಗಿತ್ತು ಮತ್ತು ಆ ಡೆಲಿಗೇಟ್‌ನು, ಸದಸ್ಯ ಸಹಕಾರಿಯ ಪದದಲ್ಲಿರುವವರೆಗೂ ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಯನ್ನು ಪ್ರತಿನಿಧಿಸುವುದು ಮುಂದುವರಿಯುತ್ತಿದ್ದರು. ಪ್ರಸ್ತುತ ಮಾಡಲಾಗಿರುವ ತಿದ್ದುಪಡಿಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ನಿರ್ಣಯಿಸಿ ಆಡಳಿತ ಮಂಡಲಿ ಯಾವುದೇ ಸದಸ್ಯನನ್ನು ಸಂಯುಕ್ತ ಸಹಕಾರಿಗೆ ಡೆಲಿಗೇಟ್‌ನಾಗಿ ಕಳುಹಿಸಬಹುದಾಗಿರುತ್ತದೆ.

### 14. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಸ್ವಯಂಪ್ರೇರಿತ ವಿಚಾರಣೆಗೆ ಆದೇಶಿಸಲು ಅಧಿಕಾರ (ಕಲಂ 61 (2)(ಎಲ್–5))

ಯಾವುದೇ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಸ್ವಯಂ ಪ್ರೇರಿತ ವಿಚಾರಣೆಗೆ ಆದೇಶಿಸಲು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ಹೊಂದಿರುತ್ತಾರೆ.

### 15. ಸಹಕಾರ ಚುನಾವಣಾ ಪ್ರಾಧಿಕಾರ ಪದಾವಳಿಯ ಪ್ರತ್ಯಾಯೋಜನೆ:

ಸಹಕಾರ ಚುನಾವಣಾ ಆಯೋಗ ಎಂಬ ಬರುವ ಕಡೆಗಳಲ್ಲಿ 'ಸಹಕಾರ ಚುನಾವಣಾ ಪ್ರಾಧಿಕಾರ' ಎಂಬ ಪದಾವಳಿಯನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ 2021ರಲ್ಲಿ ಆದ ತಿದ್ದುಪಡಿಯನ್ವಯ ಸೌಹಾರ್ದ ಸಹಕಾರಿಯ ಉಪವಿಧಿಯಲ್ಲಿ ಮಾಡಬೇಕಾದ ತಿದ್ದುಪಡಿ ಅಂಶಗಳು

– ಶ್ರೀ ಶ್ರೀಕಾಂತ್ ಬರುವೆ, ಉಪ ಪ್ರಧಾನ ವ್ಯವಸ್ಥಾಪಕ, ಟಾಸ್ಕ್‌ಫೋರ್ಸ್, ಬೆಳಗಾವಿ & ಕಲಬುರಗಿ ಪ್ರಾಂತ.

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ 3(4)(ಡಿ)ರನ್ವಯ ಕಾಲ ಕಾಲಕ್ಕೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಆದ ತಿದ್ದುಪಡಿಗೆ ಅನುಗುಣವಾಗಿ ಸಹಕಾರಿಗಳು ತಮ್ಮ ಉಪವಿಧಿಗೂ ತಿದ್ದುಪಡಿಯನ್ನು ಮುಂಬರುವ ಮೊದಲನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಮಾಡಿಕೊಳ್ಳಬೇಕಾಗಿರುತ್ತದೆ.

ಪ್ರಸ್ತುತ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ ಮಾಡಲಾದ ತಿದ್ದುಪಡಿಗಳು ದಿನಾಂಕ 07 ಅಕ್ಟೋಬರ್ 2021ರಿಂದ ಜಾರಿಗೆ ಬಂದಿರುವುದರಿಂದ ಸೌಹಾರ್ದ ಸಹಕಾರಿಗಳು ಮುಂಬರುವ ಮೊದಲನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಉಪವಿಧಿ ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ತಿದ್ದುಪಡಿ ಕಾರಣದಿಂದ ಉಪವಿಧಿ ತಿದ್ದುಪಡಿ ಮಾಡಿಕೊಳ್ಳಬೇಕಾದ ಅಂಶಗಳು ಈ ಕೆಳಕಂಡಂತಿದೆ.

1. **ಸಹಕಾರಿಯ ಹೆಸರು :** ಸಹಕಾರಿಯ ಉಪವಿಧಿಯಲ್ಲಿ ಇರುವ ಸಹಕಾರಿಯ ಹೆಸರನ್ನು ............................ 'ಸೌಹಾರ್ದ ಸಹಕಾರಿ ಸಂಘ''ವೆಂದು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ. ಹಾಗೂ 'ಸೌಹಾರ್ದ ಸಹಕಾರಿ' ಎಂದಿರುವಲ್ಲೆಲ್ಲ 'ಸೌಹಾರ್ದ ಸಹಕಾರಿ ಸಂಘ' ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ.
2. **ಸಹಕಾರಿಯ ವ್ಯಾಖ್ಯೆ :** ಸಹಕಾರಿಯ ಉಪವಿಧಿಯಲ್ಲಿ 'ಸಹಕಾರಿ' ಎಂದರೆ. ........................ ಎಂದು ಪರಿಭಾಷೆಯನ್ನು ನೀಡಲಾಗಿದ್ದು ಅಲ್ಲಿಯೂ ಸಹ ..........................ಸೌಹಾರ್ದ ಸಹಕಾರಿ ಸಂಘವೆಂದು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ.
3. **ನಿಧಿಗಳ ಸಂಗ್ರಹ :** 'ಯಾವುದೇ ಇತರೆ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳಿಂದ ಠೇವಣಿಯನ್ನು ಹೊರತುಪಡಿಸಿ' ಎನ್ನುವ ಅಂಶದೊಂದಿಗೆ ನಿಧಿಗಳ ಸಂಗ್ರಹಣೆಯಲ್ಲಿ ಅಗತ್ಯ ತಿದ್ದುಪಡಿ ಮಾಡಿಕೊಳ್ಳಬೇಕಿರುತ್ತದೆ. ಸಂಘ ಸಂಸ್ಥೆಗಳಿಂದ ಠೇವಣಿ ಸ್ವೀಕರಿಸಲು ಈ ಹಿಂದೆ ಅವಕಾಶವಿತ್ತು. ಪ್ರಸ್ತುತ ತಿದ್ದುಪಡಿಯಲ್ಲಿ ಸಂಘ-ಸಂಸ್ಥೆಗಳಿಂದ ಠೇವಣಿ ಸಂಗ್ರಹಿಸಲು ಅವಕಾಶವಿಲ್ಲದ ಕಾರಣ ಸದರಿ ಅಂಶವನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕಿದೆ.
4. **ಷೇರಿನ ಗರಿಷ್ಠ ಮಿತಿ :** ಸದಸ್ಯನು ಹೊಂದಬಹುದಾದ ಗರಿಷ್ಠ ಷೇರಿನ ಮಿತಿಯನ್ನು ಕಾಯ್ದೆ ತಿದ್ದುಪಡಿ ಮೂಲಕ ನಿಗದಿಪಡಿಸಿರುವುದರಿಂದ, ಉಪವಿಧಿಯಲ್ಲಿ ಸಹಕಾರಿಯ ಸದಸ್ಯನು ಒಟ್ಟು ಶೇರು ಬಂಡವಾಳದ ಗರಿಷ್ಠ ಶೇ.5ನ್ನು ಮಾತ್ರ ಹೊಂದಲು ಅವಕಾಶವಿರುವಂತೆ ತಿದ್ದುಪಡಿಯನ್ನು ಮಾಡಿಕೊಳ್ಳಬೇಕಿರುತ್ತದೆ.
5. **ಸದಸ್ಯತ್ವ ಅನರ್ಹತೆ :** ಸದಸ್ಯತ್ವಕ್ಕೆ ಪ್ರವೇಶ/ಸೇರಿಸಿಕೊಳ್ಳುವುದು ಮತ್ತು ಸದಸ್ಯತ್ವದಲ್ಲಿ ಮುಂದುವರೆಸಲು ಇರುವ ಅರ್ಹತೆ/ಅನರ್ಹತೆಗಳಲ್ಲಿ, ಕಾಯ್ದೆ ತಿದ್ದುಪಡಿಯಲ್ಲಿ ಕಲಂ.20ರಲ್ಲಿ ತಿಳಿಸಿರುವ ಅನರ್ಹತೆಯ ಅಂಶಗಳನ್ನು ಸೇರಿಸಿಕೊಳ್ಳಬೇಕಿರುತ್ತದೆ.
6. **ಸದಸ್ಯರ ಮತದಾನದ ಹಕ್ಕು :** ಕಾಯ್ದೆ ತಿದ್ದುಪಡಿಯಲ್ಲಿ ಕಲಂ.20ಬಿ ರಲ್ಲಿ ತಿಳಿಸಿರುವ ಸಹಕಾರಿಯ ಯಾವುದೇ ಬಾಕಿಗಳಿಗೆ ಸುಸ್ತಿದಾರನಾಗಿದ್ದರೆ, ಹಿಂದಿನ ಐದು ಮಹಾಸಭೆಗಳ ಪೈಕಿ ಯಾವುದೇ ಎರಡು ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಹಾಗೂ ಹಿಂದಿನ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ವರ್ಷಗಳಲ್ಲಿ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಾನ್ಯ ಕನಿಷ್ಠ ವ್ಯವಹಾರವನ್ನು ಮಾಡದಿದ್ದರೆ ಅಂತಹ ಸದಸ್ಯನು ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿಯ ಚುನಾವಣೆಯಲ್ಲಿ ಮತದಾನ ಮಾಡಲು ಮುಂದಿನ ಒಂದು ವರ್ಷದವರೆಗೆ ಅನರ್ಹಗೊಳ್ಳುತ್ತಾನೆ ಎಂಬ ಅಂಶವನ್ನು ಉಪವಿಧಿ ತಿದ್ದುಪಡಿಯಲ್ಲಿ ಸೇರಿಸಿಕೊಳ್ಳಬೇಕಿರುತ್ತದೆ.
7. **ನಿರ್ದೇಶಕರ ಅನರ್ಹತೆ :** ಸಹಕಾರಿಯ ಉಪವಿಧಿಯಲ್ಲಿ ನಿರ್ದೇಶಕನಾಗಿ ಚುನಾಯಿತನಾಗಲು ಮತ್ತು ಮುಂದುವರೆಯಲು ನಿಗದಿಪಡಿಸಿಕೊಂಡಿರುವ ಅನರ್ಹತೆಗಳಿಗೆ ಕಲಂ.25(1) ಮತ್ತು 25(2)ರಲ್ಲಿ ತಿಳಿಸಿರುವ ಅನರ್ಹತೆಗಳನ್ನು ಉಪವಿಧಿ ತಿದ್ದುಪಡಿಯಲ್ಲಿ ಸೇರಿಸಿಕೊಳ್ಳಬೇಕಿರುತ್ತದೆ.
8. **ಸಿಬ್ಬಂದಿ ಪದೋನ್ನತಿ :** ಸಹಕಾರಿಯ ಸಿಬ್ಬಂದಿಗಳಿಗೆ ಬಡ್ತಿ ಅಥವಾ ಪದೋನ್ನತಿ ನೀಡುವ ವಿಷಯವನ್ನು ಸಹಕಾರಿಯ ಉಪವಿಧಿಯಲ್ಲಿ ಸೇರಿಸಿಕೊಂಡಿದ್ದರೆ ಅಂತಹ ಪ್ರಾವಧಾನವನ್ನು ತಿದ್ದುಪಡಿ ಮಾಡಿ ಸಹಕಾರಿಯ ನೌಕರನು ಮೇಲಿನ ಹುದ್ದೆಗೆ ಬಡ್ತಿಯನ್ನು ಪಡೆಯಲು ಸಂಯುಕ್ತ ಸಹಕಾರಿ ನಡೆಸುವ ಕೋರ್ಸ್‌ನ್ನು ಕಡ್ಡಾಯವಾಗಿ ಯಶಸ್ವಿಯಾಗಿ ಪೂರ್ಣಗೊಳಿಸಬೇಕಿರುತ್ತದೆ ಎಂಬ ಅಂಶವನ್ನು ಉಪವಿಧಿ ತಿದ್ದುಪಡಿಯಲ್ಲಿ ಸೇರಿಸಿಕೊಳ್ಳಬೇಕಿರುತ್ತದೆ.
9. **ಡೆಲಿಗೇಟು ಕಳಿಸುವುದು :** ಸಂಯುಕ್ತ ಸಹಕಾರಿಗೆ ಡೆಲಿಗೇಟ ಕಳುಹಿಸುವ ಕುರಿತಂತೆ ಸಹಕಾರಿಯ ಉಪವಿಧಿಯಲ್ಲಿ ಪ್ರಾವಧಾನ ಹೊಂದಿದ್ದರೆ ಅದನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ – ಮಂಡಳಿಯ ಚುನಾಯಿತ ಸದಸ್ಯನನ್ನು ಸಂಯುಕ್ತ ಸಹಕಾರಿಗೆ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ನಿರ್ಣಯಿಸುವ ಮೂಲಕ ಡೆಲಿಗೇಟ್‌ನಾಗಿ ಕಳುಹಿಸಬಹುದಾಗಿರುತ್ತದೆ ಎಂದು ಮಾಡಿಕೊಳ್ಳಬೇಕಿರುತ್ತದೆ.
10. **ಚುನಾವಣಾ ಪ್ರಾಧಿಕಾರ :** ಸಹಕಾರಿಯ ಉಪವಿಧಿಗಳಲ್ಲಿ ಎಲ್ಲೆಲ್ಲಿ 'ಸಹಕಾರಿ ಚುನಾವಣಾ ಆಯೋಗ' ಎಂದು ಬಂದಿದೆಯೋ ಅದನ್ನು 'ಸಹಕಾರ ಚುನಾವಣಾ ಪ್ರಾಧಿಕಾರ' ಎಂದು ತಿದ್ದುಪಡಿ ಮಾಡಿಕೊಳ್ಳಬೇಕಿರುತ್ತದೆ.

ದಿನಾಂಕ 07 ಅಕ್ಟೋಬರ್ 2021ರಿಂದ ಜಾರಿಗೆ ಬಂದಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ ಮಾಡಲಾದ ತಿದ್ದುಪಡಿಗಳನ್ವಯ ತಮ್ಮ ಸಹಕಾರಿಯ ಉಪವಿಧಿಗಳಲ್ಲಿ ಮೇಲ್ಕಂಡ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ.



# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 66ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ

66ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಕೇಂದ್ರ ಕಛೇರಿ**



**ಕಲಬುರಗಿ ಪ್ರಾಂತೀಯ ಕಛೇರಿ**



**ಮೈಸೂರು ಪ್ರಾಂತೀಯ ಕಛೇರಿ**



**ಬೆಳಗಾವಿ ಪ್ರಾಂತೀಯ ಕಛೇರಿ**



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2020-21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್ ರಾಘವೇಂದ್ರ ರವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಕು. ರಮ್ಯ, ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮಂಡ್ಯ :** ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಕಛೇರಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಪೂಜೆ ನಡೆಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿ ಸಂಘಗಳ 2020-21ರ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸುವ ಕುರಿತು ಸರ್ಕಾರದ ಆದೇಶ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ 2020-21ರ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:-** ಸರ್ಕಾರದ ಆದೇಶ ಸಂಖ್ಯೆ: ಸಇ 45 ಸಿಎಲ್ಎಮ್ 2021, ದಿನಾಂಕ:23.08.2021.

*****

**ಪ್ರಸ್ತಾವನೆ:**

ಮೇಲೆ ಓದಲಾದ ಆದೇಶದಲ್ಲಿ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳು ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಎಂಬುದನ್ನು ಸಡಿಲಿಸಿ, 2020-21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯವನ್ನು ಮುಗಿಸಿ ವರದಿಗಳನ್ನು ಸಲ್ಲಿಸಲು ದಿನಾಂಕ:31.10.2021ರ ವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಕೋವಿಡ್-19 ಸಾಂಕ್ರಾಮಿಕ ರೋಗದ ಹಾಗೂ ಇನ್ನಿತರೆ ಕಾರಣಗಳಿಂದಾಗಿ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮೇಲ್ಕಂಡ ಅವಧಿಯಲ್ಲಿ ಸಲ್ಲಿಸುವುದು ಕಷ್ಟಸಾಧ್ಯವಾಗಿರುವ ಹಿನ್ನೆಲೆಯಲ್ಲಿ ನವೆಂಬರ್ ಅಂತ್ಯದವರೆಗೆ ಅವಧಿ ವಿಸ್ತರಿಸಲು ಸಹಕಾರಿಗಳು/ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಂದ ಸರ್ಕಾರಕ್ಕೆ ಮನವಿಗಳು ಸ್ವೀಕೃತವಾಗಿರುತ್ತದೆ. ಮೇಲ್ಕಂಡ ಅಂಶಗಳನ್ನು ಸರ್ಕಾರವು ಪುನರ್‌ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 45 ಸಿಎಲ್ಎಮ್ 2021 (ಇ) ಬೆಂಗಳೂರು, ದಿನಾಂಕ:25.10.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಇ 45 ಸಿಎಲ್ಎಮ್ 2021, ದಿನಾಂಕ:23.08.2021ರಲ್ಲಿ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು 2020-21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯಗಳನ್ನು ಮುಗಿಸಿ ವರದಿಗಳನ್ನು ಸಲ್ಲಿಸಲು ದಿನಾಂಕ:31.10.2021ರಂದು ನಿಗದಿಪಡಿಸಿರುವ ಅವಧಿಯನ್ನು ಮಾರ್ಪಡಿಸಿ ದಿನಾಂಕ:25.11.2021ರವರೆಗೆ ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಿದೆ.

ಮುಂದುವರೆದು, ಮೇಲಿನ ಅವಧಿ ವಿಸ್ತರಣೆಗೆ ಅನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63ರ ಇತರೆ ಉಪಬಂಧಗಳು ಹಾಗೂ ಇದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 33 ರ ಇತರೆ ಉಪಬಂಧಗಳಲ್ಲಿನ ಅವಕಾಶಗಳಿಗೆ ಅವಧಿ ವಿಸ್ತರಿಸಲು ಲೆಕ್ಕಪರಿಶೋಧನಾ ನಿರ್ದೇಶಕರು ಸೂಕ್ತ ಆದೇಶ ಹೊರಡಿಸಲು ಕ್ರಮವಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/10

(ಎಂ. ವೆಂಕಟಸ್ವಾಮಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿಕಾರ್ಯದರ್ಶಿ,
ಸಹಕಾರ ಇಲಾಖೆ.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು




**ಕೊಪ್ಪಳ :** ದಿ. ಗಂಗಾವತಿ ಸಮೃದ್ಧಿ ಪತ್ತಿನ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಸಹಕಾರಿಯ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬೃಹನ್ಮಠದ ಶ್ರೀ ಭುವನೇಶ್ವರಯ್ಯ ತಾತನವರು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ವಿಶ್ವನಾಥ. ಚ. ಹಿರೇಮಠ, ಶ್ರೀ ವೈ .ಟಿ .ಪಾಟೀಲ, ಶ್ರೀ ಸಂಜೀವ ಮಹಾಜನ, ಶ್ರೀ ಜಿ. ಶ್ರೀಧರ, ಸಿ.ಬಿ.ಎಸ್ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಗಿರಿಯಪ್ಪ ಹೊಸಕೇರಿ, ಕಲಬುರಗಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ, ಸಿ.ಬಿ.ಎಸ್ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸಿ. ಜಿ. ಜವಳಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ರಾಘವೇಂದ್ರರಾವ್ .ಎಂ ರವರು ವಹಿಸಿದ್ದರು. ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




**ಬೆಳಗಾವಿ :** ದಿನಾಂಕ 24.10.2021 ರಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಚಿಕ್ಕೋಡಿ ಇದರ 8ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆ ಜರುಗಿತು. ಸಹಕಾರಿಯ ಅಧ್ಯಕ್ಷರು ಮತ್ತು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಉಪಸ್ಥಿತರಿದ್ದು, ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಸದರಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ–2021ರ ಬದಲಾವಣೆಗಳು, ವಾರ್ಷಿಕ ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ಮತ್ತು ಸಿಬ್ಬಂದಿಗಳು ಸಾಲಕ್ಕೆ ಪಡೆಯಬೇಕಾದ ದಾಖಲೆಗಳು ಮುಂತಾದ ವಿಷಯದ ಕುರಿತು ಅಗತ್ಯ ಮಾರ್ಗದರ್ಶನ ನೀಡಲಾಯಿತು.

**ರಾಯಚೂರು :** ರಾಯಚೂರು ಜಿಲ್ಲೆಯ 2020–21 ಸಾಲಿನಲ್ಲಿ ನೊಂದಣಿಗೊಂಡ ಸೌಹಾರ್ದ ಸಹಕಾರಿ ಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಲೆಕ್ಕಪರಿಶೋಧನೆ ಕುರಿತು, ಸಭೆಗಳ ಕುರಿತು ಮತ್ತು ಮಾಹಿತಿ ಸಲ್ಲಿಸುವ ಕುರಿತು ವಿಷಯಗಳನ್ನು ಸಹಕಾರಿಗಳಿಗೆ ತಿಳಿಸಲಾಯಿತು. ಈ ಸಭೆಯಲ್ಲಿ ಈ ಸಭೆಯಲ್ಲಿ ಒಟ್ಟು 24 ಸಹಕಾರಿಗಳಿಂದ 27 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ :** ದಿನಾಂಕ 03.10.2021 ರಂದು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ,. ಶಿವಮೊಗ್ಗ ಇದರ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಮತ್ತು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ರವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಹಾಗೂ ಸಹಕಾರಿಯ ಆಡಳಿತ ಮಂಡಲಿ ಹಾಗೂ ಸಹಕಾರಿಯ ಸದಸ್ಯರು ಭಾಗವಹಿಸಿದ್ದರು.




**ವಿಜಯಪುರ :** ಶ್ರೀ ಗುರುಬಸವ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ ಇದರ 2020–21ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 17.10.2021 ರಂದು ಸಹಕಾರಿಯ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅರುಣ ಆರ್ ವಾರದ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.



**ಚಿತ್ರದುರ್ಗ :** ದಿನಾಂಕ 11.10.2021 ರಂದು ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ ಇದರ ಅಂಬೇಡ್ಕರ್ ಪ್ರತಿಮೆ ಬಳಿಯಿರುವ ನವೀಕೃತ ಶಾಖೆಯ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳು ಆಗಮಿಸಿ ನೆರವೇರಿಸಿದರು. ನಂತರ ರೋಟರಿ ಬಾಲ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಟಿ. ಬದರಿನಾಥ್‌ರವರು ಮಾತನಾಡಿ ಯಾವುದೇ ಒಂದು ಸಮಾಜ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದುವರೆದಾಗ ಮಾತ್ರ ಬಲಿಷ್ಠ ಸಮಾಜವಾಗಿ ಬೆಳಯಬೇಕು. ಸಂಸ್ಥೆಯು 3 ಶಾಖೆಗಳನ್ನು ಹೊಂದಿದ್ದು ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ವ್ಯಾಪಿಸುವಂತಾಗಲಿ. ಗ್ರಾಹಕರಿಗೆ ಉತ್ತಮ ಸೇವೆ ನೀಡಲಿ. ಇದಕ್ಕೆ ಸಾರ್ವಜನಿಕರ ಸಹಕಾರ ಅತ್ಯವಶ್ಯಕ ಎಂದು ಹೇಳಿದರು. ಸಹಕಾರಿಯ ಅಧ್ಯಕ್ಷರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀಯುತ ಪಿ.ಎಸ್.ನಾಗರಾಜ ಶೆಟ್ಟಿಯವರು ಮಾತನಾಡಿ ಕೇವಲ ಇ–ಸ್ಟಾಂಪಿಂಗ್ ತೆರೆಯುವುದಕ್ಕೆ ಮಾತ್ರ ಇಲ್ಲಿ ಆರಂಭಿಸಿದ ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತವು ಈಗ ನವೀಕೃತ ಶಾಖೆಯನ್ನು ತೆರೆದಿರುವುದು ಅತ್ಯಂತ ಖುಷಿ ಕೊಟ್ಟಿದೆ. ಇದಕ್ಕೆ ಎಲ್ಲರ ಸಹಕಾರವಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಾಖೆಗಳನ್ನು ತೆರೆಯುವಂತಾಗಲಿ ಎಂದರು.

## ಗುರು ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆ



**ಕಲಬುರಗಿ :** ದಿನಾಂಕ 24.10.2021 ರಂದು ಶ್ರೀ ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ನೇರವೆರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕಾಶಿನಾಥ ಮೋತಕಪಳ್ಳಿರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹಚ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಮೇಶ ಪಾಟೀಲರವರು ವಹಿಸಿದರು ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹಲ್ಲೋಳಿ.



ಶ್ರೀ ಜಯಪಾಲ ಪಾರೇಸ ಚೌಗಲಾ
ಅಧ್ಯಕ್ಷರು



ಶ್ರೀಮತಿ ಶೃತಿ ಅಶೋಕ ಪಾಟೀಲ
ಉಪಾಧ್ಯಕ್ಷರು

### ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ



ಮಂಚಿ ಶ್ರೀ ನಿತ್ಯಾನಂದ ನಾಯಕ್
ಅಧ್ಯಕ್ಷರು



ಶ್ರೀ ಭೈರಂಜೆ ಮಧುಸೂದನ ನಾಯಕ್
ಉಪಾಧ್ಯಕ್ಷರು



## ಉದ್ಘಾಟನೆ

**ರಾಯಚೂರು :** ದಿನಾಂಕ 10.10.2021 ರಂದು ಶ್ರೀ ಗುರು ರಾಘವೇಂದ್ರ ಪತ್ತಿನ ಸಹಕಾರಿ ನಿಯಮಿತ ಮಾನ್ವಿ ಇದರ ಲಿಂಗಸೂರು ಶಾಖೆ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ಶ್ರೀ ವೈ. ಟಿ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೂಗಾರ್ ಉಪಸ್ಥಿತರಿದ್ದರು

## ಶಾಖೆ ಉದ್ಘಾಟನೆ.



**ಉಡುಪಿ :** ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಇದರ ನೂತನ ಶಾಖೆಯು ದಿನಾಂಕ 27.08.2021 ಶುಕ್ರವಾರದಂದು ಅಲೆವೂರು–ರಾಂಪುರ ಸರ್ಕಲ್ ನಲ್ಲಿರುವ ದೃಮುಕ್ತಿ ವಾಣಿಜ್ಯ ಸಂಕೀರ್ಣದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥ ಇವರು ಉದ್ಘಾಟಿಸಿದರು. ನಂತರ ಮಾತನಾಡಿ ಸಹಕಾರಿ ಕ್ಷೇತ್ರವು ಈಗ ಜೀವನದ ಕ್ರಮವಾಗಿದೆ. ಇಂತಹ ಸಹಕಾರಿ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಮುನ್ನಡೆಯುತ್ತವೆ ಎಂದರು. ರಾಜ್ಯದಲ್ಲಿ ಸುಮಾರು 5300 ಸಹಕಾರಿ ಸಂಸ್ಥೆಗಳಿದ್ದು ಜಿಲ್ಲೆಯಲ್ಲಿ ಸುಮಾರು 130 ಸಹಕಾರಿ ಸಂಸ್ಥೆಗಳಿದ್ದು ಶೇ.90 ಸಾಲ ವಸೂಲಾತಿ ಆಗುತ್ತಿರುವುದರಿಂದ ಗ್ರಾಹಕರಲ್ಲಿ ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ ಹೆಚ್ಚಾಗುವಂತೆ ಆಗಿದೆ ಎಂದರು.

ಪ್ರಥಮ ಶಾಖೆಯ ಸಮಾರಂಭವನ್ನು ದಕ್ಷಿಣ ಕನ್ನಡ ಜಿಲ್ಲಾ ಪದ್ಮಶಾಲಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಜಯರಾಮ ಮಂಗಳೂರು ದೀಪ ಬೆಳಗಿಸಿ ಶುಭ ಹಾರೈಸಿದರು. ಭದ್ರತಾ ಕೊಠಡಿಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ ಕಾಮತ್, ಕಂಪ್ಯೂಟರ್ ವಿಭಾಗವನ್ನು ಮುಂಬಯಿಯ ಉದ್ಯಮಿ ಉಮೇಶ ಜಿ. ಶೆಟಿ ಅಲೆವೂರು, ಪ್ರಥಮ ಠೇವಣಿ ಪತ್ರವನ್ನು ಅಲೆವೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಪುಷ್ಪಾ ಅಂಚನ್ ವಿತರಿಸಿದರು.

ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿಯವರು ಭದ್ರತಾ ಕೋಶವನ್ನು ಉದ್ಘಾಟಿಸಿದರು. ಶ್ರೀ ವೀರಭದ್ರ ಸೌಹಾರ್ದ ಸಹಕಾರಿ ಪರ್ಕಳ ಇದರ ಅಧ್ಯಕ್ಷರಾದ ಶ್ರೀ ಸುಕೇಶ ಶೆಟ್ಟಿಗಾರ ಮತ್ತು ಇತರ ಎಲ್ಲಾ ನಿರ್ದೇಶಕರು ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಉಪಾಧ್ಯಕ್ಷರಾದ ಶ್ರೀ ಗಂಗಾಧರ ಶೆಟ್ಟಿಗಾರ್ ಸ್ವಾಗತಿಸಿ, ನಿರ್ದೇಶಕರಾದ ಶ್ರೀ ಬಿ.ಎಚ್ ಶೆಟ್ಟಿಗಾರ್ ಮತ್ತು ಶ್ರೀಮತಿ ಜಯಲಕ್ಷ್ಮಿ ಶೆಟ್ಟಿಗಾರ್ ಕಾರ್ಯಕ್ರಮ ನಿರೂಪಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ರತ್ನ ಎಸ್. ಶೆಟ್ಟಿ ವಂದಿಸಿದರು.



**ಚಿತ್ರದುರ್ಗ :** ದಿನಾಂಕ 11.10.2021 ರಂದು ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ ಇದರ ಅಂಬೇಡ್ಕರ್ ಪ್ರತಿಮೆ ಬಳಿಯಿರುವ ನವೀಕೃತ ಶಾಖೆಯ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳು ಆಗಮಿಸಿ ನೆರವೇರಿಸಿದರು. ನಂತರ ರೋಟರಿ ಬಾಲ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಟಿ. ಬದರಿನಾಥ್‌ರವರು ಮಾತನಾಡಿ ಯಾವುದೇ ಒಂದು ಸಮಾಜ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದುವರೆದಾಗ ಮಾತ್ರ ಬಲಿಷ್ಠ ಸಮಾಜವಾಗಿ ಬೆಳೆಯಬೇಕು. ಸಂಸ್ಥೆಯು 3 ಶಾಖೆಗಳನ್ನು ಹೊಂದಿದ್ದು ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ವ್ಯಾಪಿಸುವಂತಾಗಲಿ. ಗ್ರಾಹಕರಿಗೆ ಉತ್ತಮ ಸೇವೆ ನೀಡಲಿ. ಇದಕ್ಕೆ ಸಾರ್ವಜನಿಕರ ಸಹಕಾರ ಅತ್ಯವಶ್ಯಕ ಎಂದು ಹೇಳಿದರು. ಸಹಕಾರಿಯ ಅಧ್ಯಕ್ಷರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀಯುತ ಪಿ.ಎಸ್.ನಾಗರಾಜ ಶೆಟ್ಟಿಯವರು ಮಾತನಾಡಿ ಕೇವಲ ಇ–ಸ್ಟಾಂಪಿಂಗ್ ತೆರೆಯುವುದಕ್ಕೆ ಮಾತ್ರ ಇಲ್ಲಿ ಆರಂಭಿಸಿದ ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತವು ಈಗ ನವೀಕೃತ ಶಾಖೆಯನ್ನು ತೆರೆದಿರುವುದು ಅತ್ಯಂತ ಖುಷಿ ಕೊಟ್ಟಿದೆ. ಇದಕ್ಕೆ ಎಲ್ಲರ ಸಹಕಾರವಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಾಖೆಗಳನ್ನು ತೆರೆಯುವಂತಾಗಲಿ ಎಂದರು.



**ಕೊಪ್ಪಳ :** ದಿನಾಂಕ : 12.10.2021 ರಂದು ಶ್ರೀ ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕೋತ್ಸವವನ್ನು ಕೊಪ್ಪಳ ಜಿಲ್ಲೆಯ ಶ್ರೀ ಪ್ಯಾಟಿ ಈಶ್ವರ ದೇವಸ್ಥಾನದಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ, ಸಹಕಾರ ಭಾರತೀಯ ಕೊಪ್ಪಳ ತಾಲೂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ. ಜಿ, ಶ್ರೀ ದೊಡ್ಡಬಸವೇಶ್ವರ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಪ್ರೇಮಾ, ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕರು, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಉಪಸ್ಥಿತರಿದ್ದರು. ಸಹಕಾರಿಯ ಆಡಳಿತ ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ವಡಗೇರಿ,ಸಹಕಾರಿಯ ಮಾನ್ಯ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು,ಸಿಬ್ಬಂದಿ ವರ್ಗದವರು ಮತ್ತು ಸದಸ್ಯರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 11.10.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ವಿಶ್ವನಾಥ.ಚ.ಹಿರೇಮಠ, ಶ್ರೀ ವೈ.ಟಿ.ಪಾಟೀಲ, ಶ್ರೀ ಸಂಜೀವ ಮಹಾಜನ,ಶ್ರೀ ಜಿ.ಶ್ರೀಧರ ರವರು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಶ್ರೀ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತು ಪರಿಶೀಲಿಸಿ ಸಹಕಾರಿ ಅಭಿವೃದ್ಧಿಯ ಕುರಿತು ಮಾರ್ಗದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಕಲಬುರ್ಗಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕಲ್ಯಾಣ ಬಸವ, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಮತ್ತು ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 03.10.2021 ರಂದು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ 3ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಸಂಯುಕ್ತ ಸಹಕಾರಿ ಜಿಲ್ಲಾ ಸಂಪರ್ಕ ಕಛೇರಿ ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್. ಎಚ್, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಮತ್ತು ಜಿಲ್ಲಾ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಒಕ್ಕೂಟದ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಾಂತಮೂರ್ತಿ ರವರು ಉಪಸ್ಥಿತರಿದ್ದರು.

## ಉದ್ಘಾಟನೆ

**ಯಾದಗಿರಿ :** ದಿನಾಂಕ 22-10-2021ರ ಶುಕ್ರವಾರ ಯಾದಗಿರಿ ಜಿಲ್ಲೆಯ ಸುರಪುರ ನಗರದಲ್ಲಿ ನವ ಕರ್ನಾಟಕ ಜನ ಸೇವಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸುರಪುರ ಇದರ ಕಛೇರಿ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ವಾಯ್.ಟಿ.ಪಾಟೀಲ್ ಹಾಗೂ ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕಲಬುರಗಿ ಇದರ ಉಪಾಧ್ಯಕ್ಷರಾದ ಶ್ರೀ ಸುರೇಶ ಆರ್ ಸಜ್ಜನ್ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಲಬುರಗಿ ಮತ್ತು ಯಾದಗಿರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕಲಬುರಗಿ ಇದರ ನಿರ್ದೇಶಕರಾದ ಶ್ರೀ ಬಾಪುಗೌಡ ಪಾಟೀಲ್, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಎಸ್ ಕುಂಬಾರ ವಹಿಕೊಂಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು ಪಾಲಗೊಂಡಿದರು.



**ತುಮಕೂರು :** ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಇದರ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಮಹಾಸಭೆಯು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಮಾನ್ಯ ಶ್ರೀ ಬಿ. ಗಂಗಾಧರಯ್ಯ ಇವರ ಅಧ್ಯಕ್ಷತೆಯಲ್ಲಿ ನಡೆಯಿತು ಹಾಗೂ ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು. ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಹೆಚ್. ಎಂ. ಕುಶಾಲ್ ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರುದ್ರೇಶ್ ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.




**ಬಾಗಲಕೋಟ :** ಬಾಗಲಕೋಟ ಬಸವಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ ಇದರ ವಿದ್ಯಾಗಿರಿಯ ನೂತನ ಶಾಖೆಯನ್ನು ಶ್ರೀ ಜಿ ಎನ್ ಪಾಟೀಲ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇವರು ಉದ್ಘಾಟನೆ ಮಾಡಿದರು.




**ಶಿವಮೊಗ್ಗ :** ಕವಲೇದುರ್ಗ ಬಹುಉದ್ದೇಶಿ ಸೌಹಾರ್ಧ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ 2020–21 ನೇ ಸಾಲಿನ ಸರ್ವ–ಸದಸ್ಯರ ಸಭೆಯು ದಿನಾಂಕ 21–10–2021 ರಂದು ಎ.ಪಿ.ಎಂ.ಸಿ, ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಟ್ಟೇಗದ್ದೆ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು.

ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಲ್ಲಿ ಒಂದಾದ ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯು ದಿನಾಂಕ 23/11/2010 ರಂದು ಉದ್ಘಾಟನೆಗೊಂಡು ಇಂದು ಪ್ರತಿಷ್ಠಿತ ಸಹಕಾರ ಸಂಸ್ಥೆಯಾಗಿ ಹೊರಹೊಮ್ಮಿದೆ. ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಅಡಿಕೆ, ಇ–ಸ್ಟಾಂಪಿಂಗ್, ಬಿ.ಎಸ್.ಎನ್.ಎಲ್. ಕರೆನ್ಸಿ, ಅರೇಕಾ ಟೀ, ಸುಪ್ರೀಂ ಟಾರ್ಪಲ್ಸ್‌ಗಳ ಮಾರಾಟ ಸೌಲಭ್ಯವನ್ನು ನೀಡುತ್ತಿದ್ದು, ಜೊತೆಗೆ ಶಿಫಿನ್ ಸಂಸ್ಥೆಯ ಸಹಯೋಗದಲ್ಲಿ ಈಜಿಮನಿ ಎಂಬ ಆರ್ಥಿಕ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಸದಸ್ಯರು ಇದರ ಸದುಪಯೋಗ ಪಡೆಯುತ್ತಿದ್ದಾರೆ. ಈ ಎಲ್ಲಾ ಸಮಾಜಮುಖಿ ಸೇವೆಗಳ ನಡುವೆಯೇ 16 ಲಕ್ಷಕ್ಕೂ ಮೀರಿ ನಿವ್ವಳ ಲಾಭ ಗಳಿಸಿರುವುದು ಸಂತೋಷದಾಯಕ ವಿಚಾರ.

ಸಮಾರಂಭದ ಆರಂಭದಲ್ಲಿ ರಾಜಗುರು ಡಾ, ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಹಾಗೂ ಅಗಲಿದ ಸಮಾಜ ಭಾಂದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಎ,ಆರ್, ಪ್ರಸನ್ನಕುಮಾರ್‌ರವರು ಮಾತನಾಡಿ ಕರ್ನಾಟಕ ರಾಜ್ಯದ ಕೆಲವೇ ಉತ್ತಮ ಸಹಕಾರಿ ಸಂಸ್ಥೆಗಳಲ್ಲಿ ಕವಲೇದುರ್ಗ ಸೌಹಾರ್ದ ಸಹಕಾರಿಯು ಒಂದಾಗಿದೆ ಆಡಳಿತ ಮಂಡಳಿಯವರ ಪ್ರಾಮಾಣಿಕ ಸೇವೆಯಿಂದಾಗಿ ಇಂದು ಸಂಸ್ಥೆ ಈ ಮಟ್ಟಕ್ಕೆ ಬೆಳೆದಿದೆ ಎಂದು ತಿಳಿಸಿ, ನಾನು ಸಂಯುಕ್ಕ ಸಹಕಾರಿಯ ನಿರ್ದೇಶಕನಾಗುವಲ್ಲಿ ಈ ಸಹಕಾರಿಯ ಗೌರವಾಧ್ಯಕ್ಷರಾಗಿದ್ದ ರಾಜಗುರು ಡಾ, ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಆರ್ಶಿವಾದ ನನ್ನ ಮೇಲಿದೆ ಆದ್ದರಿಂದ ಇಷ್ಟಪಟ್ಟು ಈ ಸಭೆಗೆ ಆಗಮಿಸಿದ್ದೇನೆ ಎಂದರು. ನಂತರ ಸಹಕಾರಿ ವ್ಯವಸ್ಥೆಯ ವಿವರಗಳನ್ನು ನೀಡಿ ಸಂಸ್ಥೆ ಬೆಳೆಸುವ ಜವಾಬ್ದಾರಿ ಸದಸ್ಯರದ್ದು ಸದಸ್ಯರು ತಮ್ಮಲ್ಲಿರವ ಹಣವನ್ನು ಸಹಕಾರಿಯಲ್ಲಿ ಠೇವಣಿ ಮಾಡುವ ಮೂಲಕ ಹೊರಗಿನಿಂದ ಸಾಲ ತರುವುದನ್ನು ತಪ್ಪಿಸಬೇಕು ಆಗ ಸಂಸ್ಥೆ ಸದೃಡವಾಗಿ ಬೆಳೆಯಲು ಸಹಕಾರಿಯಾಗುತ್ತದೆ ಎಂದು ತಿಳಿಸಿ ತೀರ್ಥಹಳ್ಳಿಯಲ್ಲಿ ಏಳು ಸಹಕಾರಿಗಳು ಅಡಿಕೆ ಕಮಿಷನ್ ಏಜೆಂಟರಾಗಿ ಕೆಲಸ ನಿರ್ವಹಿಸುತ್ತಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ಶ್ರೀಮತಿ ವೈಷ್ಣವಿ ರಂಗನಾಥ್‌ರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಬಿಸಿ, ಶ್ರೀ ಕೂಳೂರು ಸತ್ಯನಾರಾಯಣರಾವ್ ಸ್ವಾಗತಿಸಿ, ಶ್ರೀ ರಂಗನಾಥ್ ಆಲಿಯಾಸ್ ಪಾಂಡುರಂಗಪ್ಪ ನವರು ಶ್ರದ್ಧಾಂಜಲಿ ಕಾರ್ಯಕ್ರಮ ನಿರೂಪಿಸಿದರು ಚನ್ನಬಸಪ್ಪನವರು ವರದಿ ಓದಿದರು, ಶ್ರೀ ಮುರುಗೇಂದ್ರರವರು ಲಾಭಾಂಶ ವಿತರಣೆ ವಿವರ ನೀಡಿದರು. ಶ್ರೀ ಕೆ, ಜಯರಾಮಶೆಟ್ಟಿಯವರು ವಂದಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ನೆಂಪೆ ಮಂಜುನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.



**ಮೂಡುಬಿದಿರೆ :** ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 2020–21ನೇ ಸಾಲಿನ ವಾರ್ಷಿಕ ಮಹಾಸಭೆ ಭಾನುವಾರ ಸ್ವರ್ಣಮಂದಿರದಲ್ಲಿ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಸಹಕಾರಿ ಅಧ್ಯಕ್ಷ ರಂಜಿತ್ ಪೂಜಾರಿ, ಸಂಘದ ಸದಸ್ಯರಿಗೆ ಶೇ.12 ಡಿವಿಡೆಂಟ್ ಘೋಷಿಸಿದರು. ಆಡಳಿತ ಮಂಡಳಿ, ಸಿಬ್ಬಂದಿಯ ಉತ್ತಮ ಸೇವೆಯೊಂದಿಗೆ ಗ್ರಾಹಕರು, ಸ್ವ–ಸಹಾಯ ಸಂಘಗಳ ಸದಸ್ಯರ ಸಹಕಾರದಿಂದ ದಕ್ಷಿಣ ಕನ್ನಡ ಜಿಲ್ಲಾ ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ಲಭಿಸಿದೆ. ಕೋವಿಡ್ ಸಮಯದಲ್ಲೂ ಸಂಘ ಸಾಮಾಜಿಕ ಚಟುವಟಿಕೆ ನಡೆಸಿದ್ದು, ವಿಶ್ವಾಸಾರ್ಹ ಸೇವೆ ನೀಡುತ್ತಿದೆ ಎಂದರು.

2020–21ನೇ ಸಾಲಿನಲ್ಲಿ ಹೆಚ್ಚು ಪಿಗ್ಮಿ ಸಂಗ್ರಹಿಸಿದ ದಿನೇಶ್ ಪೂಜಾರಿ, ಉತ್ತಮ ಗ್ರಾಹಕರಾದ ಐವನ್ ಕಾರ್ಡೋಜ, ವಿನಯ ನಾಯ್ಕ್, ಮಂಜುಳಾ ಜ್ಯೋತಿ, ಭವಾನಿ, ಪ್ರಮೀಳಾ ಅರುಣ್ ಪೂಜಾರಿ, ಲೂವಿಸ್ ಡಿಕ್ರಾಸ್ತ ಅವರನ್ನು ಸನ್ಮಾನಿಸಲಾಯಿತು. ವರದಿ ವರ್ಷದಲ್ಲಿ ಶೇ.100 ರಷ್ಟು ಸಾಲ ಮುರುಪಾವತಿ ಮಾಡಿದ 9 ಸ್ವ–ಸಹಾಯ ಸಂಘವನ್ನು ಗೌರವಿಸಲಾಯಿತು.

ಸಹಕಾರಿಯ ಉಪಾಧ್ಯಕ್ಷೆ ಉಷಾ, ನಿರ್ದೇಶಕರಾದ ಸುರೇಶ್ ಪೂಜಾರಿ ಎಂ, ಗೋಪಾಲ್ ಶೆಟ್ಟಿಗಾರ್, ರಾಜೇಂದ್ರ ಬಿ., ಶರತ್ ಜೆ ಶೆಟ್ಟಿ, ಶಂಕರನಾರಾಯಣ ಭಟ್, ರವೀಂದ್ರ ಕರ್ಕೇರ, ರತ್ನಾಕರ ಪೂಜಾರಿ, ನಾಗೇಶ್ ನಾಯ್ಕ, ರಮೇಶ್ ಎಸ್. ಶೆಟ್ಟಿ, ಹೇಮಾ ಕೆ. ಪೂಜಾರಿ ಉಪಸ್ಥಿತರಿದ್ದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯು. ರಾಜಶೇಖರ ಮಧ್ಯಸ್ಥ ವಾರ್ಷಿಕ ವರದಿ ವಾಚಿಸಿದರು. ಗಣೇಶ್ ಆರ್. ನಾಯ್ಕ್ ಪರಿಶೋಧಿತ ಲೆಕ್ಕಪತ್ರ ಮಂಡಿಸಿದರು. ಪ್ರತಿಭಾ ಬಜೆಟ್ ಮಂಡಿಸಿದರು. ಸ್ವ– ಸಹಾಯ ಗುಂಪುಗಳ ವಿವರವನ್ನು ರೇಖಾ ನೀಡಿದರು.



**ಶಿವಮೊಗ್ಗ :** ದಿನಾಂಕ 5–10–2010 ರಂದು ಬೆಳಗ್ಗೆ 11.09 ಗಂಟೆಗೆ ಶಾರದ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ ಜಿಲ್ಲೆ ಇದರ ಸಾಮಾನ್ಯ ಸಭೆಯು ಜರುಗಿತು. ಈ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಅವರು ಭಾಗವಹಿಸಲಾಯಿತು. ಸಾಮಾನ್ಯ ಸಭೆಯಲ್ಲಿ ಸದಸ್ಯರಿಗೆ ಮಾಹಿತಿಯನ್ನು ನೀಡಲಾಯಿತು. ಸಾಮಾನ್ಯ ಸಭೆಯು ನಿಯಮಬದ್ಧವಾಗಿ ಉತ್ತಮ ಚರ್ಚೆ ಮೂಲಕ ಯಶಸ್ವಿಯಾಗಿ ನಡೆಯಿತು.



**ಶಿವಮೊಗ್ಗ :** ದಿನಾಂಕ 09–10–2010 ರಂದು ಬೆಳಗ್ಗೆ 11.00 ಗಂಟೆಗೆ ಜೀವನ್ ಸೌಹಾರ್ದ ವಿವಿದೊದ್ದೇಶ ಸಹಕಾರಿ ನಿಯಮಿತ, ಸಾಗರ ಶಿವಮೊಗ್ಗ ಜಿಲ್ಲೆ ಇದರ ಸಾಮಾನ್ಯ ಸಭೆಯು ಜರುಗಿತು. ಈ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಅವರು ಭಾಗವಹಿಸಿದರು. ಸಾಮಾನ್ಯ ಸಭೆಯಲ್ಲಿ ಸದಸ್ಯರಿಗೆ ಮಾಹಿತಿಯನ್ನು ನೀಡಲಾಯಿತು.



**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಸಹಕಾರಿಯ 25ನೇ ವಾರ್ಷಿಕ ಸರ್ವಸದಸ್ಯರ ಸಾಧಾರಣ ಮಹಾಸಭೆಯನ್ನು ದಿನಾಂಕ 10.10.2021 ನೇ ರವಿವಾರ ಮಧ್ಯಾಹ್ನ 12.00 ಘಂಟೆಗೆ ಗದಗ ಜಿಲ್ಲಾ ಚೇಂಬರ ಆಫ ಕಾಮರ್ಸ ಎ.ಪಿ.ಎಂ.ಸಿ ಯಾರ್ಡ ರಸ್ತೆ, ಗದಗ ಇದರಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎಂ.ಪಾಟೀಲ ಸಾ॥ ಮಲ್ಲಸಮುದ್ರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ.ಆಸಂಗಿ ಇವರು ಸಹಕಾರಿಯ ಅಧ್ಯಕ್ಷರಿಗೆ ಮತ್ತು ಆಡಳಿತ ಮಂಡಲಿಯ ಸದಸ್ಯರು ಉಪಸ್ಥಿತರಿದ್ದರು.

## ಉಚಿತ ಕೋವಿಡ್ ಲಸಿಕ ಶಿಬಿರ

**ದಕ್ಷಿಣ ಕನ್ನಡ :** ಮಿರಾಕಲ್ಸ್ ಆಫ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ನಿ., ಇವರ ನೇತೃತ್ವದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಅವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕೋವಿಡ್ ಲಸಿಕ ಶಿಬಿರ ಹಮ್ಮಿಕೊಳ್ಳಲಾಯಿತು. ಅತಿಥಿಗಳಾಗಿ ರೇ.ಫಾ.ಬೊನವೆಂಚರ್ ನಜರತ್ ಧರ್ಮಗುರುಗಳು ಅವರು ಲೇಡಿ ಆಫ್ ಮಿರಾಕಲ್ಸ್, ಜೋಸ್ ಪಾಲ್ ಬಿ ವೇಗಸ್ ಅಧ್ಯಕರು ಮಿರಾಕಲ್ಸ್ ಆಫ್ ಮಿಲಾಗ್ರಿಸ್, ಲಯನ್ ಗಣೇಶ್ ಶೆಟ್ಟಿ ಅಧ್ಯಕ್ಷರು, ಲಯನ್ಸ್ ಕ್ಲಬ್ ಮಂಗಳೂರು ಹೈಲಾಂಡ್ ಹಾಗೂ ಲಯನ್ ಜಯಪ್ರಕಾಶ್ ಝೋನ್ ಚೇರ್‌ಪರ್ಸನ್, ಝೋನ್–1 ಉಪಸ್ಥಿತರಿದ್ದರು. ಕೋವಿಡ್–19 ಸಂದಿಗ್ಧ ಸಮಯದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಕೊರೋನ ವಾರಿಯರ್ಸ್‌ಗಳಾದ ಡಾ.ಶ್ಯಾಮ್ ಪ್ರಸಾದ್ ಶೆಟ್ಟಿ, ಡಾ.ಹೇಮವಾಣಿ ಪಿ, ಸಮಾಜ ಸೇವಕರಾದ ಶ್ರೀ ಪ್ರಸಾದ್ ಸಮಾಜ ಸೇವಕರಾದ ಶ್ರೀ ರವಿ, ಸಮಾಜ ಸೇವಕರಾದ ಶ್ರೀ ಸಂದೇಶ್ ಮತ್ತು ಅಂಬ್ಯುಲೆನ್ಸ್ ಚಾಲಕ ಶ್ರೀ ಆಸಿಫ್ ಯವರಿಗೆ ಸಂಸ್ಥೆಯ ಪರವಾಗಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಅತಿಥಿ ಗಣ್ಯರಿಗೆ ವ್ಯವಸ್ಥಾಪಕ ನಿರ್ದೇಶಕರಾದ ಮೊಹಮ್ಮದ್ ಶೇಖ್ ರವರು ಸ್ವಾಗತಿಸಿದರು. ಅತಿಥಿಗಳಿಗೆ ಶಾಖಾ ವ್ಯವಸ್ಥಾಪಕಿ ಮಮತಾ ರೆಬೆಲ್ಲೊ ಸ್ಮರಣಿಕೆಯನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ರೇ.ಫಾ. ಬೊನವೆಂಚರ್ ನಜರತ್‌ರವರು ಸಂಸ್ಥೆಯ ಸಮಾಜಮುಖ ಕಾರ್ಯಕ್ಕೆ ಪ್ರಶಂಸಿದರು. ಶ್ರೀಮತಿ ಚೈತನ್ಯ ರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀಮತಿ ರಕ್ಷಿತಾರವರು ಧನ್ಯವಾದ ಸಮರ್ಪಿಸಿದರು, ಹಾಗೂ ಸಂಸ್ಥೆಯ ಇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. 100ಕ್ಕೂ ಅಧಿಕ ಮಂದಿ ಈ ಲಸಿಕ ಶಿಬಿರಾದ ಪ್ರಯೋಜನ ಪಡೆದುಕೊಂಡರು.

## 11ನೇ ಸಹಕಾರಿಯ ವಾರ್ಷಿಕ ಸರ್ವ ಸಾಧಾರಣ ಮಹಾಸಭೆ

**ಗದಗ :** ಭಾಗ್ಯಲಕ್ಷ್ಮೀ ವಿವಿದೊದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ 11ನೇ ವಾರ್ಷಿಕ ಸರ್ವಸಾದಾರಣ ಮಹಾ ಸಭೆಯನ್ನು ದಿನಾಂಕ 17.10.2021 ರವಿವಾರ ದಿವಸ ಸಂಜೆ 4.00 ಗಂಟೆಗೆ ಸ್ಥಳ ಸಹಕಾರಿಯ ಕಾರ್ಯಾಲಯ ಟ್ಯಾಗೋರ ರೋಡ ಗದಗದಲ್ಲಿ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಚಾಮರಾಜನಗರ :** ಶ್ರೀ ವೀರಭದ್ರೇಶ್ವರ ಭದ್ರ ಕಾಳಮ್ಮ ಸೌಹಾರ್ದ ಸಹಕಾರಿ ನಿ., ಕಾಗಲವಾಡಿ, ಚಾಮರಾಜನಗರ ತಾಲ್ಲೂಕು, ಇದರ ಪ್ರಥಮ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ನೆರವೇರಿಸಿದರು. ತಮ್ಮ ಭಾಷಣದಲ್ಲಿ ಸಂಯುಕ್ತ ಸಹಕಾರಿ ಕಾಯ್ದೆಯ ಅಡಿಯಲ್ಲಿ ಪ್ರಸ್ತುತ 5400 ಹೆಚ್ಚು ಸೌಹಾರ್ದ ಸಹಕಾರಿಗಳು, 1400 ಹೆಚ್ಚು ಇ–ಸ್ಟಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರದಲ್ಲಿ ಪ್ರಥಮ ಬಾರಿಗೆ ಸಹಕಾರ ಸಚಿವಾಲಯ ರಚನೆ ಆಗಿದೆ ಎಂದು ತಿಳಿಸಿದರು. ಚಾಮರಾಜನಗರ ಜಿಲ್ಲೆಯಲ್ಲಿ 24 ಸಹಕಾರಿಗಳು ನೋಂದಣಿಯಾಗಿವೆ.

ಸಹಕಾರಿ ತನ್ನ ಉದ್ದೇಶಗಳಾದ ಸದಸ್ಯರಿಗೆ ಸಾಲ ಸೌಲಭ್ಯ, ಠೇವಣಿ ಸಂಗ್ರಹ, ಪಿಗ್ಮಿ ಆರ್.ಡಿ ಚಟುವಟಿಕೆಗಳಿಗೆ ಸೀಮಿತವಾಗದೇ, ಸದಸ್ಯರ ಸೇವಾ ಕೇಂದ್ರ, ಗೃಹ ಉತ್ಪನ್ನಗಳು, ಆರೋಗ್ಯ, ಶೈಕ್ಷಣಿಕ, ಕಾರ್ಯಗಳನ್ನು ನಡೆಸಲಿ, ಆರ್ಥಿಕ ಜಾಗೃತಿ ಮೂಡಿಸುವ ಕಾರ್ಯ ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಮುಂದಿನ ವರ್ಷಗಳಲ್ಲಿ ಸಹಕಾರಿಯು ಜಿಲ್ಲೆಯಲ್ಲಿ ಮಾದರಿ ಸಹಕಾರಿ ಆಗಲಿ ಎಂದು ಶುಭ ಹಾರೈಸಿದರು. ವೇದಿಕೆ ಮೇಲೆ ಮುಖ್ಯ ಪ್ರವರ್ತಕರಾದ ಶ್ರೀ ದುಗ್ಗಟಿ ಮಲ್ಲಿಕಾರ್ಜುನ ಸ್ವಾಮಿ, ಸಹಕಾರಿಯ ಪ್ರವರ್ತಕರುಗಳು ಹಾಜರಿದ್ದರು.



## ಆಯುಧ ಪೂಜೆ ಹಾಗೂ ವಿಜಯದಶಮಿ ಪೂಜಾ ಕಾರ್ಯಕ್ರಮ

**ಕೋಲಾರ :** 13.10.2021 ರಂದು ಕೋಲಾರ ಜಿಲ್ಲಾ ಸಂಪರ್ಕ ಕಚೇರಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಇಲ್ಲಿ ಆಯುಧಪೂಜೆ ಹಾಗೂ ವಿಜಯದಶಮಿ ಪ್ರಯುಕ್ತ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು.



**ಚಿಕ್ಕಮಗಳೂರು :** ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ವತಿಯಿಂದ ಸರ್ಕಾರಿ ಪ್ರಾಥಮಿಕ ಶಾಲೆ, ಅವತಿ ಗ್ರಾಮ, ಶಾಲಾ ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ಕುಡಿಯುವ ನೀರಿನ ಟ್ಯಾಂಕ್ ಮತ್ತು ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಬಿ ದೇವರಾಜ್ ರವರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ರವರು ಹಾಜರಿದ್ದರು.




**ಚಿತ್ರದುರ್ಗ :** ದಿನಾಂಕ 21.10.2021 ರಂದು ನಿಸರ್ಗ ಸ್ವ ಶಕ್ತಿ ಸೌಹಾರ್ದ ಸ್ವ-ಸಹಾಯ ಸಹಕಾರಿ ನಿ., ಹೊಸದುರ್ಗ, ಚಿತ್ರದುರ್ಗ ಈ ಸಹಕಾರಿಯ 18ನೇ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಟಿ. ಅನುಸೂಯ ಇವರು ವಹಿಸಿದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ್ ಇವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ : 02.10.2021 ರಂದು ಋಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಜಿ ॥ ಕೊಪ್ಪಳ ಸಹಕಾರಿಯಲ್ಲಿ ಮಹಾತ್ಮ ಗಾಂಧಿಜೀ ಜಯಂತಿ ಮತ್ತು ಲಾಲ ಬಹದ್ದೂರ್ ಶಾಸ್ತ್ರೀ ಇವರ ಜಯಂತಿಯನ್ನು ಆಚರಿಸಲಾಯಿತು.




**ಬೆಂಗಳೂರು :** ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು.



**ಕೊಪ್ಪಳ :** ದಿನಾಂಕ 13.10.2021 ರಂದು ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯಿಂದ ಪ್ರತಿ ವರ್ಷದಂತೆ ವಿಜಯದಶಮಿ ಹಬ್ಬದ ಪ್ರಯುಕ್ತ ಹಳೆಯ ಜಿಲ್ಲಾ ಪಂಚಾಯಿತಿ ಆವರಣದಲ್ಲಿರುವ ಶ್ರೀ ಬನ್ನಿಮಹಾಕಾಳಿ ದೇವಾಲಯದ ಆವರಣದಲ್ಲಿ ಸಹಕಾರಿಯಿಂದ ಒಂದು ದಿನದ ಪ್ರಸಾದ ಸೇವೆಯನ್ನು ಆಯೋಜಿಸಲಾಯಿತು. ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹನುಮರೆಡ್ಡಿ. ಹೆಚ್ ಮತ್ತು ಸಿಬ್ಬಂದಿ ವರ್ಗದವರು ಮತ್ತು ಸಹಕಾರಿಯ ಸದಸ್ಯರು ಮತ್ತು ಪಿಗ್ಮೀ ಏಜೆಂಟರು ಉಪಸ್ಥಿತರಿದ್ದರು.



**ಕೊಪ್ಪಳ :** ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಲಿಗಿ, ಕೊಪ್ಪಳ ಸಹಕಾರಿಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯನ್ನು ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಪಿಗ್ಮೀ ಏಜೆಂಟರೊಂದಿಗೆ ಆಚರಿಸಲಾಯಿತು.




**ಕೊಪ್ಪಳ :** ಶ್ರೀ ಸುವರ್ಣಗಿರಿ ಪತ್ತಿನ ಸೌಹಾರ್ದ ಪತ್ತಿನ ಸಹಕಾರಿ ನಿ.,ಕನಕಗಿರಿ, ಕೊಪ್ಪಳ ಸಹಕಾರಿಯ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಸಹಕಾರಿಯ ಕಛೇರಿಯ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗಳಶೆಟ್ಟರ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಡಾ.ಡಿ.ಎಮ್.ಅರವಟಗಿಮಠ, ನಾಗಭೂಷಣ ಜನಾದ್ರಿ, ವೀರೇಶ ಸಮಗಂಡಿ, ಪುಂಡಲೀಕ್ಕಪ್ಪ ದಾಯಪುಲ್ಲೆ, ಬಿ.ವಿ.ಜೋಷಿ,ಹನುಮಂತಪ್ಪ ಹುನಗುಂದ, ಕೀರ್ತಿಕುಮಾರ ಸೋನಿ ಉಪಸ್ಥಿತರಿದ್ದರು, ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ವೀರಭದ್ರಗೌಡ ಮಾಲೀ ಪಾಟೀಲ್ ಸಹಕಾರಿಯ ವಾರ್ಷಿಕ ವರದಿಯನ್ನು ಮಂಡಿಸಿದರು. ಸಹಕಾರಿಯ ಸಿಬ್ಬಂದಿಗಳಾದ ಶ್ರೀ ಮಹೇಶ, ಶ್ರೀ ಅಶೋಕ, ಶ್ರೀ ವಿನಾಯಕ, ಶ್ರೀ ಮಲ್ಲೇಶಪ್ಪ ಉಪಸ್ಥಿತರಿದ್ದರು.




**ಕಾರವಾರ :** ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ಹ್ ಲಿ., ಸದಾಶಿವಗಡ, ಕಾರವಾರ ಇದರ 7 ನೇ ವಾರ್ಷಿಕ ಸರ್ವಸಾಧಾರಣ ಸಭೆಯು ದಿ: 25/09/2021 ರಂದು ಬೆಳಿಗ್ಗೆ 11:30 ಘಂಟೆಗೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಸದಾಶಿವಗಡ ಗ್ರಾಮದ ಸಹಕಾರಿಯ ಪ್ರಧಾನ ಕಛೇರಿಯಲ್ಲಿ ನಡೆಯಿತು.

ವಾರ್ಷಿಕ ಸರ್ವಸಾಮಾನ್ಯ ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದಂತಹ ಕಾರವಾರ ಅರ್ಬನ್ ಸಹಕಾರಿ ಬ್ಯಾಂಕಿನ ನಿವೃತ್ತ ಶಾಖಾ ವ್ಯವಸ್ಥಾಪಕರು ಸಹಕಾರಿಯ ಪ್ರಗತಿಯನ್ನು ನೋಡಿ ಹರ್ಷವ್ಯಕ್ತ ಪಡಿಸಿದರು ಈ ಸಮಯದಲ್ಲಿ ಸಹಕಾರಿಯ ಅಧ್ಯಕ್ಷರು ಶ್ರೀಮತಿ. ದಿಕ್ಷಾ ಕಲ್ಗುಟಕರ ರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ. ಲಿಂಗರಾಜ ಕಲ್ಗುಟಕರರವರು, ಅಡಳಿತ ಮಂಡಳಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಸದಸ್ಯರು, ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಹೊಸಪೇಟೆ :** ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್, ಪ್ರಧಾನ ಕಚೇರಿ, ಹೊಸಪೇಟೆ, ಇದರ 2020–21 ನೇ ಸಾಲಿನ 19 ನೇ ವಾರ್ಷಿಕ ಮಹಾಸಭೆಯು ತಾ॥ 22–10–2021 ನೇ ಶುಕ್ರವಾರ ಮಧ್ಯಾಹ್ನ 12.00 ಘಂಟೆಗೆ # 504, " ನವಕರ್ನಾಟಕ " ಬಿಲ್ಡಿಂಗ್, ಪಟೇಲ ನಗರ, 4 ನೇ ವಾರ್ಡ್, ಹೊಸಪೇಟೆಯಲ್ಲಿ ಶ್ರೀ ಕೆ. ವೀರಪ್ಪ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾಸಭೆಯ ಪ್ರಾರಂಭದಲ್ಲಿ ಅಗಲಿದ ಸದಸ್ಯರಿಗೆ, ನಿರ್ದೇಶಕರಾದ ಶ್ರೀ ಪಿ. ರಾಮದಾಸ ಮತ್ತು ಬದಾಮಿ ಶಾಖೆಯ ಸಿಪಾಯಿ ಶ್ರೀ ಬಸವರಾಜ ಗುರುಶಾಂತನವರ ಇವರ ಆತ್ಮಕ್ಕೆ ಶಾಂತಿ ದಯಪಾಲಿಸಲು 2 ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರೀಮತಿ ವಿಜಯಲಕ್ಷ್ಮೀ ತಡಸ ಇವರು ಪ್ರಾರ್ಥನೆ ಮಾಡಿದರು. ಶ್ರೀ ಕಲ್ಲಯ್ಯಾ ಬ. ಶಿವಪೂಜಿ, ಪ್ರಧಾನ ವ್ಯವಸ್ಥಾಪಕರು, ಸ್ವಾಗತ ಭಾಷಣ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ವೀರಪ್ಪ, ಇವರು 2020–21 ನೇ ಸಾಲಿನ ಆಡಳಿತ ವರದಿಯನ್ನು ಓದಿ, ಸದರಿ ಸಹಕಾರಿಯು 2020–21 ನೇ ಸಾಲಿನಲ್ಲಿ ರೂ.29,88,974.41 ಲಾಭ ಗಳಿಸಿದ್ದು, ಸದಸ್ಯರಿಗೆ 9 % ಲಾಭಾಂಶ ಘೋಷಿಸಿದ್ದನ್ನು ಸರ್ವ ಸದಸ್ಯರು ಕಟ್ಟಡ ನಿಧಿಗೆ ವರ್ಗಾಯಿಸಲು ಸರ್ವಾನುಮತದಿಂದ ಸಮ್ಮತಿಸಿದರು. SSLC ಮತ್ತು PUC ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮೂರು ಮಕ್ಕಳಿಗೆ ನಗದು ರೂಪದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಡಾ॥ ಈರಣ್ಣ ಪಿ. ಶೆಟ್ಟರ, ನಿರ್ದೇಶಕರು, ಇವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಗದಗ :** ಭಾಗ್ಯಲಕ್ಷ್ಮೀ ವಿವಿದೊದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ.,ಗದಗ ಇದರ 11ನೇ ಸಹಕಾರಿಯ ವಾರ್ಷಿಕ ಸರ್ವ ಸದಸ್ಯರ ಸಾಧಾರಣ ಮಹಾಸಭೆಯನ್ನು ದಿನಾಂಕ 17/10/2021 ರವಿವಾರ ಮಧ್ನಾಹ್ನ 4=00 ಘಂಟೆಗೆ ಸಹಕಾರಿಯ ಆವರಣದಲ್ಲಿ ಸಹಕಾರಿಯ ಅಧ್ಕಕ್ಷರಾದ ಶ್ರೀ ಕೆ ಎಸ್ ಹೊಸಮಠ ಸಾ॥ ಗದಗ ಇವರ ಅಧ್ಯಕ್ಷತೆಯರಲ್ಲಿ ಜರುಗಿತು. ಸಹಕಾರಿಯ ನಿರ್ದೇಶಕರಾದ ಆಯ್ ಬಿ ಕಪ್ಪಲಿ ಇವರು ಸಹಕಾರಿಯ ಅಧ್ಯಕ್ಷರಿಗೆ ಮತ್ತು ಆಡಳಿತ ಮಂಡಲಿಯ ಸದಸ್ಯರಿಗೆ ಸ್ವಾಗತ ಕೋರಿದರು. 2020–21 ನೇ ಸಾಲಿನಲ್ಲಿ ಸಹಕಾರಿಯ ರೂಪಾಯಿ 3,50,283 ನಿವ್ವಳ ಲಾಭ ಗಳಸಿ ಸಹಕಾರಿಯ ಸದಸ್ಯರಿಗೆ ಡಿವಿಡೆಂಡ್ ಹಣ 10% ಘೋಷಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳೀತ ಮಂಡಳಿ ಸದಸ್ಯರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿ ಅವಧಿ - 5 ವರ್ಷ ವಿಮರ್ಶೆ



– ಶ್ರೀ ಸಿ.ಎನ್ ಪರಶಿವಮೂರ್ತಿ

ಭಾರತ ಸಂವಿಧಾನದ ಅನುಚ್ಛೇದ 243 ಝಡ್ ಜೆ(2) ಅನ್ವಯ "ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಮತ್ತು ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷ ಇರತಕ್ಕದ್ದು ಹಾಗೂ ಪದಾಧಿಕಾರಿಗಳ ಅವಧಿಯು ಆಡಳಿತ ಮಂಡಳಿಯ ಅವಧಿಯ ಜೊತೆಗೆ (ಅಂತ್ಯ) ವಾಗತಕ್ಕದ್ದು" ಇದಕ್ಕೆ ಪೂರಕವಾಗಿ ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959 ಕಲಂ 28ಎ(4)ಕ್ಕೆ ತಿದ್ದುಪಡಿ ಮಾಡಿದೆ. ಅದರಂತೆ

"29ಎ ಮತ್ತು 39ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟ ಮಂಡಳಿಯು ಅನ್ಯಥಾ ಉಪಬಂಧಿಸಿದುದನ್ನುಳಿದು ಸದಸ್ಯರುಗಳ ಪದಾವಧಿಯು ಚುನಾವಣೆ ದಿನಾಂಕದಿಂದ ಐದು ವರ್ಷಗಳಿರತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಂದು ಮಂಡಳಿಯ ಅಂಥ ಸದಸ್ಯರು ಅವರ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು

**ಕಲಂ.29ಎ(1) ರಲ್ಲಿ**

"ಮಂಡಳಿಯ ಸದಸ್ಯರ ಪದಾವಧಿಯು, ಮಂಡಳಿ ಸದಸ್ಯರ ಪೈಕಿ ಬಹುಮತ ಸದಸ್ಯರು ಅಧಿಕಾರವಹಿಸಿಕೊಳ್ಳುವ ದಿನಾಂಕದಂದು ಅಥವಾ ಬಿಟ್ಟುಹೋಗುತ್ತಿರುವ ಮಂಡಳಿಯ ಸದಸ್ಯರ ಪದಾವಧಿಯು ಮುಕ್ತಾಯವಾದ ದಿನದಂದು, ಇದರಲ್ಲಿ ಯಾವದು ನಂತರವೋ ಅಂದು ಪ್ರಾರಂಭವಾಗತಕ್ಕದ್ದು."

**ಕಲಂ39ಎ(2) ಈ ಕೆಳಕಂಡಂತೆ ಸೂಚಿಸಿದೆ.**

"ಸಹಕಾರ ಸಂಘಗಳ ಮಂಡಳಿಯ ಸದಸ್ಯರ ಸಾಮಾನ್ಯ ಚುನಾವಣೆಗಳು, ಈ ಮುಂದಿನಂತೆ, ನಾಲ್ಕು ಹಂತಗಳಲ್ಲಿ ನಡೆಯತಕ್ಕದ್ದು.

(ಎ) ಮೊದಲ ಹಂತದಲ್ಲಿ, ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆ ನಡೆಸತಕ್ಕದ್ದು.

(ಬಿ) ಎರಡನೇ ಹಂತದಲ್ಲಿ, ಮಾಧ್ಯಮಿಕ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆ ನಡೆಸತಕ್ಕದ್ದು.

(ಸಿ) ಮೂರನೇ ಹಂತದಲ್ಲಿ, ಸಂಯುಕ್ತ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆ ನಡೆಸತಕ್ಕದ್ದು.

(ಎ) ನಾಲ್ಕನೇ ಹಂತದಲ್ಲಿ, ಅಪೆಕ್ಸ್ ಸಹಕಾರ ಸಂಘಗಳ ಸಂಬಂಧದಲ್ಲಿನ ಚುನಾವಣೆ ನಡೆಸತಕ್ಕದ್ದು.

ಪರಂತು, ಸಹಕಾರ ಚುನಾವಣಾ ಪ್ರಾದಿಕಾರವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಾಗಿ ಪೂರ್ವಸಿದ್ಧಾತಾ ಕಾರ್ಯವನ್ನು, ಒಂದು ಸಹಕಾರ ಸಂಘದ ಮಂಡಳಿಯ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸತಕ್ಕದ್ದು

ಕರ್ನಾಟಕ ಸೌಹಾರ್ದ ಕಾಯಿದೆ ಕಲಂ.24(2)ರಲ್ಲಿ ಈ ಕೆಳಕಂಡಂತೆ ಸೂಚಿಸಿದೆ.

"ಈ ಅಧಿನಿಯಮದಲ್ಲಿ ಅಗತ್ಯ ಪಡಿಸಿದ ಹೊರತು ಚುನಾಯಿತ ನಿರ್ದೇಶಕರುಗಳು ಪದಾವಧಿಯು ಚುನಾವಣೆ ನಡೆದ ದಿನಾಂಕದಂದು ಐದು ವರ್ಷಗಳಾಗಿರತಕ್ಕದ್ದು.

ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ನಿರ್ದೇಶಿಕತ್ವದ ಅಧಿಕಾರವಧಿಯು ಪ್ರತಿನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಳಿ ಅಧಿಕಾರಾವಧಿಯೊಂದಿಗೆ ಅಂತ್ಯ ವಾಗತಕ್ಕದ್ದು.

ಸೌಹಾರ್ದ ಕಾಯಿದೆ ಕಲಂ 26ರಲ್ಲಿ ಮಂಡಳಿ ಚುನಾವಣೆ ಬಗ್ಗೆ ಈ ಕೆಳಕಂಡಂತೆ ಉಲ್ಲೇಖಿಸಿದೆ.

"(1) ಹೊಸದಾಗಿ ಚುನಾಯಿತವಾದ ಮಂಡಳಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಳಿ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಳಿ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ ನಡೆಸತಕ್ಕದ್ದು.

**ಸೂಚನೆ :** ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಕಲಂ.39 ಎ ನಲ್ಲಿ ನಿಗದಿ ಪಡಿಸಿದ ಹಂತಗಳ ಚುನಾವಣೆ, ಸೌಹಾರ್ದ ಸಹಕಾರಿ ಕಾಯಿದೆ 1997 ರಲ್ಲಿ ಹಂತಗಳ ಚುನಾವಣೆ ನಡೆಸಬೇಕಿಲ್ಲ ಮತ್ತು ಸೌಹಾರ್ದ ಕಾಯಿದೆ ಕಲಂ. 39ಎ ಅನ್ವಯ ಚುನಾವಣಾ ಪ್ರಾಧಿಕಾರ, ಕರ್ನಾಟಕ ಸಹಕಾರ ಕಾಯಿದೆ ಕಲಂ.39 ಎಎ ಅನ್ವಯ ಚುನಾವಣೆ ನಡೆಸುವ ಪ್ರಾಧಿಕಾರ ಆಗಿರತಕ್ಕದ್ದು ಎಂದಿದೆ. ಅಂದರೆ ಕಲಂ.39 ಎ ನಲ್ಲಿನ ಹಂಗಗಳು ಸೌಹಾರ್ದ ಕಾಯಿದೆಗೆ ಅನ್ವಯ ಆಗುವುದಿಲ್ಲ.

**ಕರ್ನಾಟಕ ಸೌಹಾರ್ದ ಕಾಯಿದೆ ಕಲಂ.26ಎ ನಲ್ಲಿ ಸೂಚಿಸಿದೆ.**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ ಚುನಾವಣಾ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲು ಸಹ ಚುನಾವಣಾ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಈ ಅಧಿನಿಯಮದಡಿಯಲ್ಲಿ ಸಂಯುಕ್ತ ಸಹಕಾರಿಯು ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತಿವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಕರ್ನಾಟಕ ಸೌಹಾರ್ದ ಕಾಯಿದೆ 1997 ರ ಕಲಂ 54(3) ರಲ್ಲಿ ಸಂಯುಕ್ತ ಸಹಕಾರಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ತಿಳಿಸಿದೆ.

ಸಂಯುಕ್ತ ಸಹಕಾರಿ ಕಲಂ.58ರಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸೂಚಿಸಿದೆ.

"(1) ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಮತ್ತು ಪದಾಧಿಕಾರಿಗಳ ಪದಕ್ಕೆ ಚುನಾವಣೆ ನಡೆಸುವುದು ಸಹಕಾರ ಚುನಾವಣಾ ಪ್ರಾಧಿಕಾರದ ಜವಾಬ್ದಾರಿಯಾಗಿರತಕ್ಕದ್ದು.

(2) ನಿರ್ಗಮಿಸುತ್ತಿರುವ ಮಂಡಳಿಯ ಸದಸ್ಯರು ಪದಾವಧಿಯ ಮುಕ್ತಾಯದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿ ಸದಸ್ಯ ಪದಗ್ರಹಣ ಮಾಡಲು ಅನುವಾಗುವಂತೆ ನಿರ್ಗಮಿಸುತ್ತಿರುವ ಮಂಡಲಿಯ ಅವಧಿಯು ಕೊನೆಗೊಳ್ಳುವ ನಿಕಟ ಪೂರ್ವದಲ್ಲಿ ಹೊಸ ಮಂಡಳಿಯ ಸದಸ್ಯರ ಚುನಾವಣೆ ನಡೆಸತಕ್ಕದ್ದು.

(3) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು ಪದಗ್ರಹಣ ಮಾಡತಕ್ಕದ್ದು.

(4) ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಕಲಂ 26ಎ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

ಮೇಲ್ಕಂಡಂತೆ ಪದಾವಧಿ ಮತ್ತು ಚುನಾವಣೆ ಬಗ್ಗೆ ತಿದ್ದುಪಡಿಗೆ ಪೂರ್ವದಲ್ಲಿ ಇದ್ದ ಅವಕಾಶಗಳು ಈ ಕೆಳಕಂತಂತೆ ಇತ್ತು – 1959 ರ ಕಾಯಿದೆ ಕಲಂ.28ಎ(4)

"29ಎ ಮತ್ತು 39ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟ ಸಮಿತಿಯ ಸದಸ್ಯರುಗಳ ಪದಾವಧಿಯು ಐದು ಸಹಕಾರ ವರ್ಷಗಳಾಗಿರತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಂದು ಸಮಿತಿಯ ಅಂಥ ಸದಸ್ಯರು ಅವರ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು. ಮಧ್ಯದಲ್ಲಿ ಸಮಿತಿಗೆ ಚುನಾವಣೆ ನಡೆಸಿರುವಲ್ಲ. ಸಮಿತಿಯ ಪದಾವಧಿಯನ್ನು ಲೆಕ್ಕಹಾಕರುವ ಉದ್ದೇಶಕ್ಕಾಗಿ ಸಹಕಾರ ವರ್ಷದ ಉಳಿದ ಭಾಗವನ್ನು ಸಹಕಾರ ವರ್ಷವೆಂದು ಭಾವಿಸತಕ್ಕದ್ದು.

**ವಿವರಣೆ** : ಈ ಉಪಪ್ರಕರಣದ ಉದ್ದೇಶಗಳಿಗಾಗಿ ಸಹಕಾರ ವರ್ಷದ ಕರ್ನಾಟಕ ಸೌಹಾರ್ದ ಕಾಯಿದೆ ಕಲಂ.24(2) ಪದಾವಧಿ ಬಗ್ಗೆ ಈ ಕೆಳಕಂಡಂತೆ ಇದೆ.

"ನಿರ್ದೇಶಕರುಗಳ ಪದಾವಧಿಯು ಪದಧಾರನೆ ಮಾಡಿದ ದಿನಾಂಕದಂದು ಐದು ವರ್ಷಗಳಾಗಿರತಕ್ಕದ್ದು ಮತ್ತು ಇಡೀ ಮಂಡಳಿಗೆ ಚುನಾವಣೆ ನಡೆಸತಕ್ಕದ್ದು.

**ವಿವರಣೆ** : ಮಂಡಳಿಗೆ ಚುನಾವಣೆಯನ್ನು ವರ್ಷದ ಮಧ್ಯದಲ್ಲಿ ನಡೆಸಲಾಗಿದ್ದರೆ, ಆ ವರ್ಷದ ಉಳಿದ ಭಾಗವನ್ನು ಒಂದು ವರ್ಷವೆಂದು ಭಾವಿಸತಕ್ಕದ್ದು.

ಈ ಮೇಲ್ಕಂಡ ಅವಕಾಶದಂತೆ ಪದಾವಧಿ ಐದು ವರ್ಷಗಳೆಂದು ನಿಗದಿ ಪಡಿಸಿದ್ದರೂ. ಅದು ಸಹಕಾರ ವರ್ಷವೆಂದು ಅರ್ಥೈಸಬೇಕು. ಉದಾಹರಣೆಗೆ ಒಂದು ಸಂಘದ ಸಹಕಾರಿಯ ಚುನಾವಣೆ ಮಾರ್ಚ್ ಒಂದನೇ ತಾರೀಖು ನಡೆದಿದ್ದರೆ, ಮಾರ್ಚ್ 31ಕ್ಕೆ ಅಂದರೆ 31 ದಿವಸಕ್ಕೆ ಒಂದು ಸಹಕಾರ ವರ್ಷವಾಗುತ್ತಿತ್ತು. ಏಕೆಂದರೆ ಸಹಕಾರಿ ವರ್ಷ ಪ್ರತಿ ಮಾರ್ಚ್ ತಿಂಗಳಿಗೆ ಮುಕ್ತಾಯವಾಗುತ್ತಿತ್ತು. ಸಂವಿಧಾನ ತಿದ್ದುಪಡಿಯಾದ ನಂತರ ಪ್ರಾರಂಭದಲ್ಲಿ ತಿಳಿಸಿದಂತೆ ಚುನಾವಣೆಯಾದ ದಿನಾಂಕದಿಂದು ಐದು ವರ್ಷಗಳು ಎಂದು ತಿದ್ದುಪಡಿ ಮಾಡಲಾಗಿದೆ. ಇದರಿಂದ ಚುನಾಯಿತ ಮಂಡಲಿಯ ಅವಧಿ ಪೂರ್ಣ ಐದು ವರ್ಷಗಳ ಅವಧಿಯಾಗಿದೆ. ಇದರ ಜೊತೆಗೆ ಎರಡೂ ಕಾಯಿದೆಗಳಲ್ಲಿ ನಿರ್ಗಮಿಸುವ ಮಂಡಲಿ ನಿರ್ದೇಶಕರು, ಆ ಮಂಡಳಿಯ ಪದಾವಧಿ ಮುಕ್ತಾಯವಾಗುವ ಮೊದಲು ಹೊಸ ಮಂಡಳಿ ರಚನೆಗೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಹಕಾರ ನೀಡದಿದ್ದರೆ, ಅಂದರೆ, ಮಂಡಲಿ ರಚನೆ ಯಾಗದಿದ್ದರೆ, ಅಂತಹ ನಿರ್ದೇಶಕರು ಮುಂದಿನ ಐದು ವರ್ಷದ ಅವಧಿಗೆ ಚುನಾಯಿತರಾಗಲು, ನೇಮಕವಾಗಲು ಅಥವಾ ಮುಂದುವರಿಯಲು ಅನರ್ಹರು ಎಂದು ಉಲ್ಲೇಖಿಸಿದೆ. ಕರ್ನಾಟಕ ಸಹಕಾರಿ ಸಂಘಗಲ ಕಾಯಿದೆ 1959ರ ಕಲಂ. 29ಸಿ(3)(ಎ) ನಂತೆ

39ಎ ಪ್ರಕರಣ ಮತ್ತು 29ಎಫ್ ಪ್ರಕರಣದ ಪ್ರಕಾರ ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ನೆರವಾಗಲು ವಿಫಲವಾದರೆ.

ಹಾಗೆ ವಿಫಲವಾದ ಮಂಡಳಿಯ ಪ್ರತಿಯೊಬ್ಬ ಸದಸ್ಯರಲ್ಲಿ ಅನರ್ಹತೆ ಆದೇಶದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಂಘದ ಮಂಡಳಿಯು ಸದಸ್ಯನಾಗಿ ಚುನಾಯಿತನಾಗಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರಿಯಲು ಅನರ್ಹನಾಗಿರತಕ್ಕದ್ದು.

ಇದೇ ರೀತಿ ಕರ್ನಾಟಕ ಸೌಹಾರ್ದ ಕಾಯಿದೆ ಕಲಂ.25(2)(ಎ) ಅನ್ವಯ.

ಮಂಡಳಿಯ ನಿರ್ದೇಶಕರು ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯ ನೆರವು ನೀಡದಿದ್ದರೆ (ಅಥವಾ (ಬಿ)................(ಸಿ)...............) ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿವರೆಗೆ ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಳು ಸಹ ಅನರ್ಹರಾಗಿರತಕ್ಕದ್ದು."

ಮತ್ತು ಕಲಂ.55(2)(ಎ) ನಲ್ಲಿ ಸಂಯುಕ್ತ ಸಹಕಾರಿ ಮಂಡಳಿಗೆ ಸಂಬಂಧಪಟ್ಟಂತೆ

"(ಎ) ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯು ಮುಕ್ತಾಯವಾಗುವುದರೊಳಗಾಗಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯ ನೆರವು ನೀಡದಿದ್ದರೆ"

[(ಬಿ)............... (ಸಿ)............... (ಡಿ) ............... (ಇ) ...............]

ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರಿಯಲು ಅನರ್ಹನಾಗಿರತಕ್ಕದ್ದು."

ಈ ಮೇಲ್ಕಂಡ ಅವಕಾಶದಂತೆ ನಿರ್ಗಮಿಸುತ್ತಿರುವ ಮಂಡಲಿ, ತನ್ನ

ಅವಧಿ ಮುಗಿಯುವ ಪೂರ್ವದಲಿ (6 ತಿಂಗಳ ಮೊದಲು ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆ ನಡೆಸಲು ಮನವಿ ಸಲ್ಲಿಸಿ) ಹೊಸ ಮಂಡಳಿ ಚುನಾವಣೆಗೆ ಕ್ರಮ ಜರುಗಿಸದಿದ್ದರೆ ನಿರ್ದೇಶಕ ತನ ಕಳೆದುಕೊಳ್ಳುತ್ತಾರೆ ಎಂದಿದು.

ಸಂವಿಧಾನ ತಿದ್ದುಪಡಿ 2011ರಲ್ಲಿ ಆಗಿದ್ದ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಕಾಯಿದೆ 1997ಕ್ಕೆ 2013ರಲ್ಲಿ ತಿದ್ದುಪಡಿ ತರಲಾಗಿದೆ. ಸಂವಿಧಾನ ತಿದ್ದುಪಡಿ ಮತ್ತು ರಾಜ್ಯ ಕಾಯಿದೆಗಳಿಗೆ ತಿದ್ದುಪಡಿಯಾಗುವ ಮತ್ತು ನಡೆದ ಹಲವಾರು ಚುನಾವಣೆ ಸಹಕಾರ ವರ್ಷಕ್ಕೆ ಸಂಬಂಧಪಟ್ಟಂತೆ ಆಯ್ಕೆಯಾಗಿದ್ದು, ಐದು ಕ್ಯಾಲೆಂಡರ್ ವರ್ಷ ಮುಗಿಯದೆ ಇದ್ದ ಸಹಕಾರ ಸಂಘಗಳ ಉಚ್ಚ ನ್ಯಾಯಾಲಯದಲ್ಲಿ ಐದು ವರ್ಷ ಪೂರೈಸಿಲ್ಲವೆಂದು, ಆಡಳಿತಾಧಿಕಾರಿ ನೇಮಿಸಿದಂತೆ ನಿಬಂಧಕರಿಗೆ ನಿರ್ದೇಶನ ನೀಡಲು ಪರಿಹಾರ ಕೇಳಿದಾಗ, ಪರಿಹಾರ ಸಿಕ್ಕಿದೆ. ಅಂದರೆ ರಾಜ್ಯ ಕಾಯಿದೆಯಲ್ಲಿ, ಚುನಾವಣೆಯಾದ ದಿನಾಂಕದಿಂದ ಐದು ವರ್ಷಗಳು ಎಂದು ಇಲ್ಲದೇ ಇದ್ದರೂ. ಸಂವಿದಾನದಲ್ಲಿ ಆದ ತಿದ್ದುಪಡಿ ಆಧಾರದ ಮೇಲೆ, ಯಾವ ಮಂಡಳಿಗಳ ಚುನಾವಣೆ, ಸಹಕಾರ ವರ್ಷದ ಆಧಾರದ ಮೇಲೆ ನಡೆದಿದ್ದರೂ. ಆ ಮಂಡಳಿಯ ಅವದಿಯನ್ನೂ ಸಹ, ಚುನಾವಣಾ ದಿನಾಂಕದಿಂದ ಐದು ಕ್ಯಾಲೆಂಡರ್ ವರ್ಷಗಳೆಂದು, ಪರಿಹಾರ ಪಡೆಯುತ್ತವೆ ಎಂದು ತೀರ್ಮಾನಿಸಿ, ಉಚ್ಚ ನ್ಯಾಯಾಲಯ ಪರಿಹಾರ ನೀಡಿದೆ.

ಇದಕ್ಕೆ ವಿರುದ್ದವಾಗಿ ಐದು ಕ್ಯಾಲೆಂಡರ್ ವರ್ಷ ಮುಗಿದ ಮಂಡಲಿ ಅವದಿ, ಅ ಮಂಡಲಿ ಅವಧಿ (ಐದು ವರ್ಷ) ಮುಗಿಯುವ ಪೂರ್ವದಲ್ಲಿ ಹೊಸ ಆಡಳಿತ ಮಂಡಲಿ ಚುನಾವಣೆ ನಡೆಸತಕ್ಕದ್ದು (6 ತಿಂಗಳ ಮೊದಲು ವರದಿ ಮಾಡಲು ಜವಾಬ್ದಾರಿ ಮಂಡಳಿಗೆ ಇದೆ) ಎಂದಿದ್ದರೂ ಬೇರೆ ಬೇರೆ ಕಾರಣಗಳಿಂದ ಚುನಾವಣೆ ನಡೆಯದಿದರೆ, ಅಂತಹ ಮಂಡಳಿ ಅವಧಿ ಹಿಂದಿನ ಚುನಾವಣೆ ನಡೆದು ಐದು ಕ್ಯಾಲೆಂಡರ್ ವರ್ಷಗಳು ಮುಗಿದಿದ್ದರೆ, ಅಂತಹ ಮಂಡಳಿ ಅವದಿ ಮುಕ್ತಾಯವಾದಂತೆ ಎಂದು ಸ್ಪಷ್ಟವಾಗಿ ತಿಳಿಸಿದ್ದರೂ, ನ್ಯಾಯಾಲಯವನ್ನು ದಾರಿ ತಪ್ಪಿಸಿ, ಚುನಾವಣೆಗೆ, ಸಹಕಾರಿ/ಸಂಘದ ತಪ್ಪಿನಿಂದಲ್ಲವೆಂದು ಪರಿಹಾರ ಪಡೆಯಬಹುದು. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ರಿಟ್ ಅರ್ಜಿ ಸಂಖ್ಯೆ 12511–12515/2016(CS–ಇಐ/ಒ) ರಲ್ಲಿ ದಿನಾಂಕ 10.03.2016 ರಂದು ಉಚ್ಚನ್ಯಾಯಾಲಯ ರಿಟ್ ಅರ್ಜಿಯನ್ನು ಕೇಳಿರುವ ಆಡಳಿತಾಧಿಕಾರಿ ನೇಮಿಸಬಾರದೆಂಬ ಮನವಿಗೆ ತಡೆಯಾಜ್ಞೆ ನೀಡಿದೆ. ರಿಟ್ ಅರ್ಜಿಯಲ್ಲಿ ಕೇಳಿರುವ ಪರಿಹಾರ ಈ ಕೆಳಕಂಡಂತೆ ಇದೆ.

2 ಮತ್ತು 3ನೇ ವಲಯ ಅರ್ಜಿದಾರರು ಆಡಳಿತಾಧಿಕಾರಿ ನೇಮಿಸದಂತೆ ಮತ್ತು ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಳ್ಳದಂತೆ ನಿರ್ದೇಶನ ನೀಡಬೇಕು ಮತ್ತು ಹಾಲಿ ಆಡಳಿತ ಮಂಡಲಿ ಅಧಿಕಾರದಲ್ಲಿ ಮುಂದುವರಿಯತಕ್ಕದ್ದು ಮತ್ತು ಮುಂದಿನ ಆಡಳಿತ ಮಂಡಲಿ ಚುನಾಯಿತರಾಗುವವರೆವಿಗೆ ಮತ್ತು 4 ಮತ್ತು 5ನೇ ಎದುರು ಅರ್ಜಿದಾರರ ತುರ್ತಾಗಿ ಚುನಾವಣೆ ನಡೆಸಲು ನಿರ್ದೇಶನ ನೀಡಲು ಪರಿಹಾರ ಕೇಳಿದೆ.

ಈ ಮನವಿಗೆ ಉಚ್ಚನ್ಯಾಯಾಲಯ ಮೇಲೆ ಕೇಳಿದ ತಡೆಯಾಜ್ಞೆ ನೀಡಿ, ದಿನಾಂಕ 10.03.2013 ರಂದು ಆದೇಶಿಸಿದೆ. ಈ ರಿಟ್ ಅರ್ಜಿಯಲ್ಲಿ ವಿಮರ್ಷಿಸಬೇಕಾದ ಅಂಶವೇನೆಂದರೆ ಈ ರಿಟ್ ಅರ್ಜಿಯಲ್ಲಿ ಮೊದಲನೇ ಅರ್ಜಿದಾರರ ಕರ್ನಾಟಕ ರಾಜ್ಯ ಸೌಹಾರ್ದಸಂಯುಕ್ತ ಸಹಕಾರಿ ನಿ., ಸಂಯುಕ್ತ ಸಹಕಾರಿ ಒಂದು ಶಾಸನದಲ್ಲಿಯೇ ರಚನೆಯಾದ ಒಂದು ಪ್ರಾಧಿಕಾರ, ಇದಕ್ಕೆ ಸೌಹಾರ್ದ ಕಾಯಿದೆಯನ್ನು ಜಾರಿ ಮಾಡಲು ಅಧಿಕಾರ ನೀಡಿದೆ. ಅದು ಅರ್ಜಿದಾರನಾಗತಕ್ಕದ್ದಲ್ಲ. ಏಕೆಂದರೆ ಆ ಸಂಯುಕ್ತ ಸಹಕಾರಿ ಯಾವುದೇ ಮಂಡಲಿ ಚುನಾವಣೆ ಆಗಲಿ ಬಿಡಲಿ, ಪ್ರಾಧಿಕಾರದ ರೂಪದಲ್ಲಿ, ಸಂಯುಕ್ತ ಸಹಕಾರ ಕಾರ್ಯನಿರ್ವಹಿಸಬೇಕು. ರಿಟ್ ಮೂಲಕ ಪರಿಹಾರ ಪಡೆಯತಕ್ಕದ್ದಲ್ಲ. ಎರಡನೇ ಅಂಶ, 2 ರಿಂದ 5ನೇ ಅರ್ಜಿದಾರರ ಹಾಲಿ ಮಂಡಳಿಯ ನಿರ್ದೇಶಕರು, ಅವರ ಆಯ್ಕೆ ದಿನಾಂಕ 16.03.2011ಕ್ಕೆ ಪ್ರಾರಂಭವಾಗಿದೆ. ಅವರು ಆಯ್ಕೆಯಾದಾಗ ಸಹಕಾರ ವರ್ಷ ಅನ್ವಯವಾಗುತ್ತಿತ್ತು. ಇದಕ್ಕೆ ಕರ್ನಾಟಕ ಹಾಲು ಮಹಾಮಂಡಳದ ಚುನಾವಣೆ ಬಗ್ಗೆ ತೀರ್ಪಿನಲ್ಲಿ ಚುನಾವಣೆ ದಿನಾಂಕದಿಂದ ಐದು ವರ್ಷಗಳಿಂದ ಪರಿಹಾರ ನೀಡಿತ್ತು. ಅಂದರೆ ಸಂವಿಧಾನ ತಿದ್ದುಪಡಿಯ ನಂತರ ಚುನಾವಣೆ ದಿನಾಂಕದಿಂದ ಐದು ವರ್ಷ ಎಂದು ಪರಿಹಾರ ನೀಡಿದೆ. ಸಂಯುಕ್ತ ಸಹಕಾರಿ ಪ್ರಕರಣದಲ್ಲಿ ಚುನುವಣೆ 16.032011 ರಂದು ನಡೆದಿದ್ದು, 15.03.2016ಕ್ಕೆ ಯದು ವರ್ಷಗಳ ಅವಧಿ ಮುಗಿಯುತ್ತಿದೆ. ಅಂದರೆ 16.03.2016 ರಿಂದ ಆಡಳಿತಾಧಿಕಾರ ಅಧಿಕಾರ ವಹಿಸಿಕೊಳ್ಳಬೇಕು. ಆದರೆ, ಈ ಪ್ರಕರಣದಲ್ಲಿ ಸಂವಿಧಾನಕ್ಕೆ ವಿರುದ್ದವಾಗಿ ನ್ಯಾಯಾಲಯದಿಂದ ಪರಿಹಾರ ಪಡೆಯಲಾಗಿದೆ.

ಪಂಚಾಯತ್ ರಾಜ್ ಕಾಯಿದೆ ಮತ್ತು ಕೃಷಿ ಮಾರುಕಟ್ಟೆ ಕಾಯಿದೆ ಎರಡೂ ಕಾಯಿದೆಗಳಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶವಿದ್ದು, ಇದೇ ನೀತಿಯನ್ನು ಅನುಸರಿಸಿ ಸಹಕಾರ ಕಾಯಿದೆಗಳಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶ ಇಲ್ಲದೇ ಇದ್ದರೂ ವಿಧಾನ ಮಂಡಳದಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲು ಒಪ್ಪಿಗೆ ಪಡೆದಿದ್ದು, ರಾಜ್ಯಪಾಲರ ಒಪ್ಪಿಗೆ ದೊರೆತ ನಂತರ ಕಾಯಿದೆಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ರಚನೆಯಾದ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಚುನಾಯಿತರಾದ ಮಂಡಳಿ ಮೇಲೆ ಅವಿಶ್ವಾಸ ನಿರ್ಣಯವನ್ನು ಸಹಕಾರ ಸಂಘಗಳಲ್ಲೂ ಮಂಡಿಸಬಹುದೆಂದು ಭಾರತೀಯ ಶ್ರೇಷ್ಠ ನ್ಯಾಯಾಲಯ ಗುಜರಾತ್ ಉಚ್ಚನ್ಯಾಯಾಲಯದ ತೀರ್ಪನ್ನು ಸಮರ್ಥಿಸಿ, ವಿಶೇಷ ಮೇಲ್ಮನವಿ 3047/2015 ದಿನಾಂಕ 19.03.2015 ರಲ್ಲಿ ತೀರ್ಪಿತ್ತಿದೆ. ಅಂದರೆ, ಈ ಅವಿಶ್ವಾಸ ನಿರ್ಣಯ ಮಂಡನೆ ಬಗ್ಗೆ ನೀಡಿದ ತೀರ್ಪನ್ನು ತಾತ್ವಿಕವಾಗಿ, ಮಂಡಳಿ ರಚನೆ ಮತ್ತು ಪದಾವಧಿ ಬಗ್ಗೆ ಅನ್ವಯಿಸಿದಾಗ, ಯಾವುದೇ ಕಾರಣಕ್ಕೂ ಒಂದು ಸಹಕಾರ ಮಂಡಳಿಯ ಪದಾವಧಿ ಮುಕ್ತಾಯವಾಗುವ ಮೊದಲು, ಹೊಸ ಮಂಡಳಿ ರಚಣೆಗೆ ಕ್ರಮ ಜರುಗಿಸದಿದ್ದರೆ ಅಥವಾ ಯಾವುದೇ ಕಾರಣಕ್ಕೆ ಮಂಡಲಿ ರಚನೆಯಾಗದಿದ್ದರೆ, ನಿರ್ಗಮಿಸುತ್ತಿರುವ ಮಂಡಳಿ ಅಥವಾ 5 ವರ್ಷ ಮುಕ್ತಾಯದ ದಿನ, ಅವರು ಸ್ಥಾನದಿಮದ ನಿರ್ಗಮಿಸಿದ್ದಾರೆಮದು ಅರ್ಥೈಸಬೇಕು.

ಅದರಂತೆ ಸೌಹಾರ್ದ ಕಾಯಿದೆಯ ಸಂಯುಕ್ತ ಸಹಕಾರಿ ರಚನೆ 16.03.2011 ರಂದು ರಚನೆಯಾಗಿದ್ದರು, ಅದರ ಪದಾವಧಿ 15.03.2016

ರಂದು ತನ್ ತಾನೇ ಕೊನೆಗೊಳ್ಳುತ್ತದೆ ಎಮದು ಅರ್ಥೈಸಬೇಕು. ಉಚ್ಚನ್ಯಾಯಾಲಯದಲ್ಲಿ ಅಂತರಿಕ ಅರ್ಜಿ ಮೂಲಕ ಆಡಳಿತಾಧಿಕಾರಿ ನೇಮಕಕ್ಕೆ ತಡೆಯಾಜ್ಞೆ ಪಡೆದಿದೆ. ಆದರೆ ಸಂವಿಧಾನದನ್ವಯ 5ವರ್ಷಗಳಿಗೆ ಅವಧಿ ಮುಕ್ತಾಯ 15.03.2016 ರಂದು ಆಗಿದೆ.

ಈ ಮಧ್ಯೆ 15.03.2016 ರಿಂದು ಚುನಾವಣೆ ಯಾಗುವ ತನಕ, ಆಡಳಿತಾಧಿಕಾರಿ ಬದಲು, ಅಧಿಕಾರ ಕಳೆದುಕೊಂಡ ಆಡಳಿತ ಮಂಡಳಿ ಮುಂದುವರಿಯುತ್ತದೆ. ಇದರ ಜೊತೆಗೆ ಪ್ರತಿನಿಧಿಸುವ ಸಹಕಾರಿಯು ಪದಾವಧಿ ಮುಕ್ತಾಯವಾದ ದಿನಾಂಕದಿಂದ ಸಂಯುಕ್ತ ಸಹಕಾರಿಯ ನಿರ್ದೇಶಕನ ನಿಂತು ಹೊಗುತ್ತದೆ ಎಂಬುದಕ್ಕೂ ವಿರುದ್ದವಾಗಿ, ಹಾಲಿ ಮಂಡಳಿ ಮುಂದುವರಿಯಬಹುಗೇ? ಇದರಿಂದ ನ್ಯಾಯಾಲಯವನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಂಡಂತೆಯಲ್ಲವೇ? ಇದೇ ರೀತಿ ಕರ್ನಾಟಕ ರಾಜ್ಯ ಮಾರಾಟ ಮಂಡಳದ ಪ್ರಕರಣದಲ್ಲಿಯೂ, ಅವಧಿ (5 ವರ್ಷ) ಮುಗಿದಿದ್ದರೂ, ನ್ಯಾಯಾಲಯದ ಆದೇಶ ಪಡೆದು ಮುಂದುವರಿಯುತ್ತಿದೆ. ಇದೇ ಮಾರಾಟ ಚುನಾವಣೆಗಳು ನಡೆಯದಂತೆ, ಯಾವುದಾದರೂ ಒಂದು ಕಾರಣದಿಂದ ಮುಂದುವರಿದಿದ್ದರು. ಸುಮಾರು 25 ರಿಟ್ ಅರ್ಜಿಗಳನ್ನು ಮೂರು ಚುನಾವಣೆಗಳನ್ನು ಯಾರಾದರೂ ನಿರ್ದೇಶಕರು ಮುಖಾಂತರ ದಾಖಲಿಸಿ ತಡೆಯಾಜ್ಞೆ ಪಡೆದಿದ್ದರು ಎಂಬುದನ್ನು ಗಮನಿಸಿದಾಗ ಚುನಾಯಿತ ಮಂಡಳಿ ಯಾವುದಾದರು ಕಾರಣದಿಂದ ಅವಧಿ ಮುಗಿದರೂ ಮುಂದುವರಿಯುವ ಪ್ರವೃತ್ತಿಸರಿಯೇ?

ಎಲ್ಲಾ ಶಾಸನಬದ್ಧ ಸಂಸ್ಥೆಗಳಿಗೆ ಮಂಡಳಿಗಳ ಅವಧಿಯನ್ನು ನಿರ್ಧರಿಸಲಾಗಿದೆ. ಮೊದಲನೆಯದಾಗಿ

1. ಲೋಕಸಭೆಗೆ 5 ವರ್ಷ / ರಾಜ್ಯ ಸಭೆಗೆ 6 ವರ್ಷ
2. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ 5 ವರ್ಷ
3. ಕೃಷಿ ಮಾರುಕಟ್ಟೆ ಸಮಿತಿ 5 ವರ್ಷ

ಈ ಮೇಲ್ಕಂಡ ಸಂಸ್ಥೆಗಳಿಗೆ ಅವಧಿ ಮುಗಿದ ಕೂಡಲೇ ಆಡಳಿತಾಧಿಕಾರಿ ನೇಮಕವಾಗುತ್ತಾರೆ.

ಲೋಕಸಭೆ ಮತ್ತು ರಾಜ್ಯ ಸಭೆಗೆ ಕೇಂದ್ರ ಚುನಾವಣೆ ಆಯೋಗ ಅವಧಿ ಮುಗಿಯುವ ಪೂರ್ವದಲ್ಲಿಯೇ ಚುನಾವಣೆ ನಡೆಸುವ ಜವಾಬ್ದಾರಿ ಹೊತ್ತಿದ್ದು, ಯಾವುದೇ ಕಾರಣಕ್ಕೆ ಅವಧಿ ವಿಸ್ತರಿಸಬೇಕಾದರೆ ಸಂವಿಧಾನ ತಿದ್ದುಪಡಿ ಮುಖಾಂತರವೇ ಮಾಡಬೇಕು. ಇದಕ್ಕೆ ಎರಡು ಪ್ರಕರಣಗಳನ್ನು ವಿರ್ಮಷಿಸಬಹುದು.

1. ಕರ್ನಾಟಕ ರಾಜ್ಯದಲ್ಲಿನ ಬೊಮ್ಮಾಯಿ ಸಂಪುಟವನ್ನು ವಜಾ ಮಾಡಿದ ಬಗ್ಗೆ ಉಚ್ಚನ್ಯಾಯಾಲಯ ರಾಷ್ಟ್ರಾಧ್ಯಕ್ಷರ ಆಡಳಿತ ಹೇರಿದನ್ನು ರದ್ದುಪಡಿಸಿದ್ದರು ಅವರನ್ನು ಮುಖ್ಯ ಮಂತ್ರಿಯಾಗಿ ಮರುಸ್ಥಾಪಿಸಲಾಗಲಿಲ್ಲ. ಏಕೆಂದರೆ, ವಿಧಾನ ಸಭೆ ಅವಧಿ ಈ ತೀರ್ಪು ಬರುವ ಪೂರ್ವದಲ್ಲಿ ಮುಕ್ತಾಯವಾಗಿತ್ತು.

2. ಇತ್ತೀಚಿಗೆ ಎರಡು ರಾಜ್ಯದ ಮುಖ್ಯ ಮಂತ್ರಿಗಳು (ಮಂತ್ರಿ ಮಂಡಳದವರು) ವಜಾ ಮಾಡಿ ರಾಷ್ಟ್ರಾಧ್ಯಕ್ಷರ ಆಡಳಿತ ಹೇರಿದಾಗ, ಶ್ರೇಷ್ಠ ನ್ಯಾಯಾಲಯ, ಆ ಆದೇಶವನ್ನು ಕಿತ್ತು ಹಾಕಿ, ಮುಖ್ಯ ಮಂತ್ರಿಗಳನ್ನು ಮರು ಸ್ಥಾಪಿಸಿದರು. ಏಕೆಂದರೆ, ಆ ವಿಧಾನ ಸಭೆಗಲ ಅವಧಿ ಇನ್ನೂ ಮುಕ್ತಾಯವಾಗಿರಲಿಲ್ಲ.

ಈ ಎರಡೂ ತೀರ್ಪುಗಳನ್ನು ಶ್ರೇಷ್ಠ ನ್ಯಾಯಾಲಯ ನೀಡಿದ ನಿರ್ದೇಶನ ಬಹುಮತವನ್ನು ವಿಧಾನ ಸಭೆಯಲ್ಲಿಯೇ ತೀರ್ಮಾನಿಸಬೇಕೆಂದು, ಅಂದರೆ ನಿಗದಿಪಡಿಸಿದ ವಿಧಾನ ಸಭೆ ಅವಧಿಯೊಳಗೆ ರಾಷ್ಟ್ರಾಧ್ಯಕ್ಷರ ಆದೇಶ ಕಿತ್ತು ಹಾಕಿದಾಗ, ಅಧಿಕಾರ ಕಳೆದುಕೊಂಡ ಸರ್ಕಾರ ಮರು ಸ್ಥಾಪನೆಯಾಗಬೇಕು. ಇದು ಬೊಮ್ಮಾಯಿ ಪ್ರಕರಣದ ತೀರ್ಮಾನವನ್ನು ಅನುಸರಿಸಿ ಇದರ ನೀತಿ, ಒಂದು ವಜಾ ಮಾಡಿದ ಆದೇಶವನ್ನು ನ್ಯಾಯಾಲಯ ರದ್ದು ಪಡಿಸಿದರೆ, ವಿಧಾನ ಸಭೆ ಅವಧಿ ಇನ್ನು ಇದ್ದರೆ, ಅದೇ ಸರ್ಕಾರ ಮರು ಸ್ಥಾಪನೆಯಾಗುತ್ತಿದೆ. ಬೊಮ್ಮಾಯಿ ಪ್ರಕರಣದಲ್ಲಿ ವಿಧಾನ ಸಭೆ ಅವಧಿ ಮುಕ್ತಾಯವಾಗದ್ದದರಿಂದ ರಾಷ್ಟ್ರಾಧ್ಯಕ್ಷರ ಆದೇಶ ಕಿತ್ತು ಹಾಕಿದರೂ. ಅವರನ್ನು ಮುಖ್ಯ ಮಂತ್ರಿಯಾಗಿ ಮರುಸ್ಥಾಪಿಸಲು ಶ್ರೇಷ್ಠ ನ್ಯಾಯಾಲಯ ಆದೇಶಿಸಲಿಲ್ಲ. ಏಕೆಂದರೆ ವಿಧಾನ ಸಭೆ ಅವಧಿ ಮುಕ್ತಾಯವಾಗಿ ಅಸ್ತಿತ್ವದಲ್ಲಿ ಇರಲಿಲ್ಲ.

ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿನ ಸಂಯುಕ್ತ ಸಹಕಾರಿ ಒಂದು ಶಾಸನಬದ್ಧ ಸಂಸ್ಥೆ, ಕಾಯಿದೆಯಲ್ಲಿಯೇ ಸೃಷ್ಟಿಯಾಗಿದೆ. ನಿಬಂಧಕರ ನಿಯಂತ್ರಣ ಇರಬಾರದೆಂದು, ಅವರ ಅಧಿಕಾರವನ್ನು ಸಂಯುಕ್ತ ಸಹಕಾರಿ (ಕಲಂ 53) ಎಂಬ ಸಂಸ್ಥೆಯನ್ನು ಹುಟ್ಟಿಹಾಕಿ, ಅದಕ್ಕೆ ನಿಬಂಧಕರ ಅಧಿಕಾರ ನೀಡಲಾಗಿದೆ. ಇವುಗಳಲ್ಲಿ ಪ್ರಮುಖವಾದ ಅಧಿಕಾರಗಳು (1) ಲೆಕ್ಕಾಧಿಕಾರ ನೇಮಿಸುವುದು. (2) ಚುನಾವಣಾಧಿಕಾರಿ ನೇಮಕ (3) ವಿಚಾರಣೆ (4) ಆಡಳಿತಾಧಿಕಾರಿ ನೇಮಕ (5) ನಿರ್ದೇಶಕರನ್ನು ಕಿತ್ತು ಹಾಕುವುದು/ ಅನರ್ಹತೆಗೊಳಿಸುವುದು (6) ಸಮಾಪನಾಧಿಕಾರ (7) ತಪಾಸಣೆ ಇತ್ಯಾದಿ. ನಿಬಂಧಕರು ಸಹಕಾರಿಯನ್ನು ನೋಂದಾಯಿಸುವುದು ಮತ್ತು ನೋಂದಾವಣೆ ರದ್ದು ಪಡಿಸುವುದು ಹೊರತು ಪಡಿಸಿ ಉಳಿದೆಲ್ಲ ಜವಾಬ್ದಾರಿಗಳನ್ನು ಸಂಯುಕ್ತ ಸಹಕಾರಿಗೆ ನೀಡಿತ್ತು. 2004ರಲ್ಲಿ ಕೆಲವು ಅಧಿಕಾರಗಳನ್ನು ಮೊಟಕುಗೊಳಿಸಿತು ಮತ್ತು ಸಂವಿಧಾನದ 97ನೇ ತಿದ್ದುಪಡಿ ನಂತರ ಲೆಕ್ಕಾಧಿಕಾರ ನೇಮಕ ಮತ್ತು ಚುನಾವಣೆಯನ್ನು ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಈಗಲೂ ಸಂಯುಕ್ತ ಸಹಕಾರಿ ಶಾಸನಬದ್ಧ ಅಧಿಕಾರ ಎಂದರೆ, ಸದಸ್ಯ ಸಹಕಾರಿಗಳ ಮಂಡಳಿಯನ್ನು ರದ್ದು ಪಡಿಸಿ ಆಡಳಿತಾಧಿಕಾರ ನೇಮಕ ಮತ್ತು ಸದಸ್ಯ ಸಹಕಾರಿಗಳ ನಿರ್ದೇಶಕರನ್ನು ಅನರ್ಹತೆಗೊಳಿಸಿ ತೆಗೆದು ಹಾಕುವುದು ಮತ್ತಿತರ ಹಕ್ಕು ಚಲಾಯಿಸಬಹುದಾಗಿದೆ. ಅದರಲ್ಲಿ ಅವಧಿ ಮುಗಿದ ಮಂಡಳಿಗೆ ಆಡಳಿತಾಧಿಕಾರಿ ನೇಮಕವೂ ಸೇರುತ್ತದೆ. ಅಂದರೆ ಸಂಯುಕ್ತ ಸಹಕಾರಿ ಶಾಸನಬದ್ಧ ಅಧಿಕಾರ ಚಲಾಯಿಸಬೇಕಾದರೆ, ಆ ಸಂಸ್ಥೆ ಶಾಸನ ಬದ್ಧವಾಗಿರಬೇಕು. ಹಾಲಿ ಸಂಯುಕ್ತ ಸಹಕಾರಿ ಮಂಡಳಿ 16.03.2011ರಲ್ಲಿ ರಚನೆಯಾಗಿದ್ದು 15.03.2016ಕ್ಕೆ ಆ ಮಂಡಳಿಯು ಅವಧಿ ಸಂವಿಧಾನದಂತೆ ಮುಕ್ತಾಯವಾಗಿದೆ. ಈಗ ಆ ಸಂಯುಕ್ತ ಸಹಕಾರಿ ಶಾಸನಬದ್ಧ ಸಂಸ್ಥೆಯಲ್ಲ

ಮತ್ತು 15.03.2016 ರಿಂದ ಹೊಸ ಮಂಡಳಿ ರಚನೆಯಾಗುವ ತನಕ ಉಚ್ಚನ್ಯಾಯಾಲಯದ ತಡೆಆಜ್ಞೆ ತಂದಿರುವುದರಿಂದ ಈ ಅವಧಿಯಲ್ಲಿ ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿ ಮಂಡಳಿ ರದ್ದು ಪಡಿಸಿ, ಆಡಳಿತಾಧಿಕಾರಿ ನೇಮಿಸಬಹುದು ಮತ್ತು ಸದಸ್ಯ ಸಹಕಾರಿ ನಿರ್ದೇಶಕರನ್ನು, ನಿರ್ದೇಶಕತನದಿಂದ ಅನರ್ಹತೆಗೊಳಿಸಿರಬಹುದು. ಈ ತೀರ್ಮಾನ ಶಾಸನಬದ್ಧ ಅಧಿಕಾರವಾಗದು. ಇವುಗಳನ್ನು ಚಲಾಯಿಸಲು ಶಾಸನಬದ್ಧ ಮಂಡಳಿ ಇರಬೇಕಲ್ಲವೇ ? ಅಂತರಿಕ ಅರ್ಜಿಯ ಮೇಲೆ ಆಡಳಿತಾಧಿಕಾರಿ ನೇಮಕಕ್ಕೆ ತಡೆಯಾಜ್ಞೆಯನ್ನು ಸಂಯುಕ್ತ ಸಹಕಾರಿ ಪಡೆದಿದ್ದು, ಅಂತಿಮ ತೀರ್ಮಾನದಲ್ಲಿ ಐದು ವರ್ಷದ ಅವಧಿ 15.03.2016ಕ್ಕೆ ಮುಕ್ತಾಯವಾಗಿದೆ ಎಂದರೆ 15.08.2016 ರಿಂದ ಹೊಸ ಮಂಡಳಿ ರಚನೆಯಾಗುವ ತನಕ ಸಂಯುಕ್ತ ಸಹಕಾರಿ ತೆಗೆದುಕೊಂಡ ಶಾಸನಬದ್ಧ ತೀರ್ಮಾನಗಳು ಅಸಿಂಧುವಾಗಬೇಕು. ಆಗೆ ಮಾಡಿದರೆ ಆಗುವ ಪರಿಣಾಮಗಳ ಬಗ್ಗೆ ನ್ಯಾಯಾಲಯ ಯಾವ ರೀತಿ ಆದೇಶಿಸಬೇಕು.

ಆದ್ದರಿಂದ ಸೌಹಾರ್ದ ಕಾಯಿದೆಯಲ್ಲಿನ ಸಂಯುಕ್ತ ಸಹಕಾರಿಯನ್ನು ಒಂದು ನೋಂದಾಯಿತ ಸಹಕಾರಿ ಅಥವಾ ಸಂಘವೆಂದು ಪರಿಗಣಿಸಬಾರದು. ಈ ಸಂಯುಕ್ತ ಸಹಕಾರಿ ನಿಬಂಧಕರ ಕೆಲಸ ನಿರ್ವಹಿಸುತ್ತಿರುವುದರಿಂದ, ಬೇರೆ ಮಹಾಮಂಡಳಗಳಂತೆ ನ್ಯಾಯಾಲಯದಲ್ಲಿ ಪರಿಹಾರ ಪಡೆಯಲಾಗದು ಮತ್ತು ಬಾರದು. ಇದರ ಜೊತೆಗೆ ಈ ರಿಟ್ ಅರ್ಜಿಯನ್ನು ಮೊದಲನೇ ಅರ್ಜಿದಾರರು ಸಂಯುಕ್ತ ಸಹಕಾರಿ ಅಂದರೆ ನಿಬಂಧಕರು ರಾಜ್ಯ ಸರ್ಕಾರದ ಮೇಲೆ ರಿಟ್ ದಾಖಲಿಸಿ, ಪರಿಹಾರ ಕೇಳಿದಂತಾಗುತ್ತದೆ. ಸಂಯುಕ್ತ ಸಹಕಾರಿಗೆ ರಿಟ್ ದಾಖಲಿಸುವ ಅಧಿಕಾರ ಇಲ್ಲ. ಏಕೆಂದರೆ ಇದು ಶಾಸನಬದ್ಧ ಸಂಸ್ಥೆ, ಸಂಯುಕ್ತ ಸಹಕಾರಿಗೆ ಯಾವ ವ್ಯಕ್ತಿಗಳ ಮಂಡಳಿ ಸದಸ್ಯರಾಗುತ್ತಿರೆಂಬುದು ವಿಷಯವೇ ಅಲ್ಲ. ಚುನಾವಣಾ ಪ್ರಾಧಿಕಾರ, ಕಾನೂನಿನನ್ವಯ ಚುನಾವಣೆ ನಡೆಸಿಕೊಡುವತನಕ, ರಿಟ್ ಮುಖಾಂತರ ಪರಿಹಾರ ಕೇಳಲು ಸಂಯುಕ್ತ ಸಹಕಾರಿ ಅರ್ಹವಲ್ಲ.

ಸಹಕಾರ ಸಂಘಗಳ ಕಾಯಿದೆ ಕಲಂ 28ಎ ಮತ್ತು ಸೌಹಾರ್ದ ಸಹಕಾರಿ ಕಾಯಿದೆ ಕಲಂ. 24(2) ರಲ್ಲಿ ಆಡಳಿತ ಮಂಡಳಿ ಅವಧಿ ಐದು ವರ್ಷಗಳೆಂದು ನಿರ್ಧರಿಸಿದ್ದು, ಚುನಾವಣೆ ಸಂದರ್ಭದಲ್ಲಿ ಆಯ್ಕೆಯಾದ ಸದಸ್ಯರು, ಆಯ್ಕೆ ಐದು ವರ್ಷಗಳು ಎಂದು ತಿಳಿದಿದ್ದರೂ. ಅಧಿಕಾರದಲ್ಲಿ ಮುಂದುವರಿಯುವ ಮಹಾತ್ವಾಂಕ್ಷೆ ಏಕೆ ? ಇದರ ಜೊತೆಗೆ ಐದು ವರ್ಷಗಳ ನಂತರ ಅಧಿಕಾರ ಮುಕ್ತಾಯವಾಗುತ್ತಿದೆ ಎಂದು ಸೃಷ್ಟಿಯಾಗಿ ನಮೂದಾಗಿದ್ದರು, ಮುಂದುವರಿಯುವ ಪ್ರಯತ್ನಗಳ, ಕಾನೂನಿಗೆ ವಿರುದ್ಧವಾಗಿದೆ ಎಂದು ತಿಳಿದಿದ್ದರೂ ನ್ಯಾಯಾಲಯದ ಮೂಲಕ ಮುಂದುವರಿಯುವ ಪ್ರಯತ್ನ ಸರಿಯಲ್ಲ.

ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಸ್ವತಂತ್ರ ಚುನಾವಣಾ ಪ್ರಾಧಿಕಾರ ರಚಿಸಬೇಕೆಂದು ತಿಳಿಸಿದೆ. ಅದರಂತೆ 2013ರ ತಿದ್ದುಪಡಿಯಲ್ಲಿ ಚುನಾವಣಾ ಆಯೋಗ ಎಂದು ರೂಪಿಸಿದ್ದರೂ 2014ರಲ್ಲಿ ತಿದ್ದುಪಡಿ ತಂದು ಆಯೋಗಕ್ಕೆ ಬದಲಾಗಿ ಪ್ರಾದಿಕಾರ ಎಂದು ಮಾಡಿದ್ದರು ಸರಿಯೇ? ಇದು ಸಂವಿಧಾನದ ಆಶಯಗಳ ವಿರುದ್ಧವಲ್ಲವೇ ? ಇದ್ದರಿಂದ ಸರ್ಕಾರ ಚುನಾವಣೆಗೆ ಸಂಬಂಧಪಟ್ಟಂತೆ ಆಯೋಗದ ಕೆಲಸದಲ್ಲಿ ಮಧ್ಯಪ್ರವೇಶ ಮಾಡುವ ಒಂದು ಅವಕಾಶವೇ?

ಈ ಹಿಂದೆ ಕರ್ನಾಟಕ ಸಹಕಾರ ಸಂಘಗಳ ನಿಯಮ 13ರಲ್ಲಿ ಹೊಸ ಆಡಳಿತ ಮಂಡಲಿ ರಚನೆಯಾಗುವ ತನಕ, ಹಾಲಿ ಮಂಡಳಿ ಮುಂದುವರಿಯುತ್ತದೆ. ಎಂದು ಅವಕಾಶ ಕಲ್ಪಿಸಿತ್ತು. ಅಂದರೆ ನಿಬಂಧಕರು ಚುನಾವಣೆ ಮಾಡಲು ವಿಳಂಬವಾದರೆ, ಹಳೇ ಆಡಳಿತ ಮಂಡಲಿ ಮುಂದುವರಿಯುತ್ತದೆಂದು. ಈಗ ಈ ಅವಕಾಶ ಕೈಬಿಡಲಾಗಿದೆ ಏಕೆಂದರೆ, ಚುನಾವಣಾ ಪ್ರಾಧಿಕಾರ ಸ್ಥಾಪನೆಯಾಗಿದೆ. ಸಂವಿಧಾನ ಮತ್ತು ಸಹಕಾರ ಕಾಯಿದೆಗಳಲ್ಲಿ ಮಂಡಳಿ ಅವಧಿಯನ್ನು ನಿರ್ಧರಿಸಿ ಐದು ವರ್ಷಗಳ ಎಂದು ನಿಗದಿ ಪಡಿಸಿದೆ ಇದರ ಜೊತೆಗೆ ಐದು ವರ್ಷಗಳ ಮುಕ್ತಾಯವಾದ ದಿನಾಂಕದಂದು, ಮಂಡಳಿ ಸ್ಥಾನ ಬಿಟ್ಟುಕೊಟ್ಟಿದೆ ಎಂದು ಅರ್ಥೈಸಲಾಗಿದೆ.

ಸಾಮಾನ್ಯವಾಗಿ ಚುನಾವಣೆಗೆ ಸಂಬಂಧಪಟ್ಟಂತೆ, ಶ್ರೇಷ್ಠ ನ್ಯಾಯಾಲಯ ಸೃಷ್ಟವಾಗಿ ನಿರ್ದೇಶಿಸಿರುವುದು, ಯಾವುದೇ ಕಾರಣದಿಂದ ಚುನಾವಣೆ ಪ್ರಕ್ರಿಯೇ ಪ್ರಾರಂಭವಾದ ನಂತರ, ಸಾಮಾನ್ಯವಾಗಿ ನ್ಯಾಯಾಲಯಗಳ ಮಧ್ಯಪ್ರವೇಶ ಮಾಡಬಾರದೆಂದು, ಈ ಪ್ರಸಂಗದಲ್ಲಿ ಚುನಾವಣಾ ಪ್ರಕ್ರಿಯೇ ಪ್ರಾರಂಭವಾಗದೇ ಇದ್ದರೂ, ಇದು ಹೊಸ ಮಂಡಳಿ ರಚನೆಗೆ ಸಂಬಂಧಪಟ್ಟಿದ್ದು ಮಧ್ಯಪ್ರವೇಶ ಮಾಡಲು ತಪ್ಪಿಸಬಹುದಿತ್ತು. ಅಂದರೆ ಚುನಾವಣಾ ಪ್ರಾಧಿಕಾರಕ್ಕೆ ಇಂತಿಷ್ಟು ದಿನಗಳಲ್ಲಿ ಚುನಾವಣೆ ನಡೆಸಲು ನಿರ್ದೇಶಿಸಬಹುದಿತ್ತು. ಈ ಆದೇಶ ಮಾಡಿ ಈಗಾಗಲೇ 6 ತಿಂಗಳ ಅವಧಿ ಮುಗಿದಿದೆ. ಇಲ್ಲಿ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಇದಕ್ಕೆ ಬದಲಾಗಿ ಉಚ್ಚನ್ಯಾಯಾಲಯ ಆಂತರಿಕ ಅರ್ಜಿ ಆಧಾರ ಮೇಲೆ ತಡೆಯಾಜ್ಞೆ ನೀಡುವ ಬದಲು, ಮುಖ್ಯ ಅರ್ಜಿಯನ್ನು ತೀರ್ಮಾನಿಸಿದ್ದರೆ ಒಂದು ಶಾಸನಾತ್ಮಕ ಜವಾಬ್ದಾರಿ ನಿರ್ವಹಿಸಲು ಸಂಯುಕ್ತ ಸಹಕಾರಿಗೆ ಅನುಕೂಲವಾಗುತ್ತಿತ್ತು.

ವಕೀಲರನ್ನು ನ್ಯಾಯಾಲಯದ ಅಧಿಕಾರಿಗಳು ಎಂದು ಮತ್ತು ನ್ಯಾಯಾ ವಿತರಣೆಯಲ್ಲಿ ವಕೀಲರೇ ಸತ್ಯತೆಯನ್ನು ತಿಳಿಯಲು ಸಹಕರಿಸಬೇಕೆಂದು ನ್ಯಾಯಾಲಯ ಅಪೇಕ್ಷಿಸುತ್ತದೆ. ವಕೀಲರು ಒಬ್ಬ ಕಕ್ಷಿದಾರನ ಪರವಾಗಿದ್ದರೂ, ನ್ಯಾಯಾಲಯವನ್ನು ತಪ್ಪು ಮಾಹಿತಿ ನೀಡಬಾರದೆಂದು ಅಪೇಕ್ಷಿಸುತ್ತದೆ.

ರಿಟ್ ಅರ್ಜಿ 12511–12515/2016 ದಿನಾಂಕ 10.03.2016 ರಂದು ದಾಖಲಾಗಿ ನೋಟೀಸ್ ನೀಡಲಾಗಿದೆ. ಸರ್ಕಾರದ ವಕೀಲರು ಸಂಯುಕ್ತ ಸಹಕಾರಿ ಎಂದು ಶಾಸನಬದ್ಧ ಸಂಸ್ಥೆ, ಮತ್ತು ನಿಬಂಧಕರ ಅಧಿಕಾರ ನೀಡಿದ್ದು, ಮಂಡಳಿ ರಚನೆ ಮಾಡಲು ಮತ್ತು ಆಡಳಿತಾಧಿಕಾರ ನೇಮಿಸದಂತೆ ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ಮತ್ತು ಆಡಳಿತಾಧಿಕಾರ ನೇಮಕ ಮಾಡಲು ಮನವಿ ಮಾಡದೇ ಇರುವುದು ಸರಿಯಾದ ಕ್ರಮವಲ್ಲ.

ಉಚ್ಚನ್ಯಾಯಾಲಯ ಯಾವುದೇ ಪ್ರಸಂಗದಲ್ಲಿ ರಿಟ್ ಸ್ವೀಕರಿಸಿ ತೀರ್ಮಾನ ಮಾಡುವ ಅಧಿಕಾರ ಇದೆ. ಆದರೆ ಅರ್ಜಿದಾರರ ಪರ ವಕೀಲರು, ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಸಂಸ್ಥೆ, ನಿಬಂಧಕರ ಜವಾಬ್ದಾರಿ ನಿರ್ವಹಿಸುತ್ತಿದೆ ಎಂಬ ಅಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದರೆ, ಇಂತ ಆಂತರಿಕ ಅರ್ಜಿ ಮೇಲೆ ಆಡಳಿತಾಧಿಕಾರಿ ನೇಮಕಕ್ಕೆ ತಡೆಯಾಜ್ಞೆ ನೀಡುತ್ತಿರಲಿಲ್ಲ. ಇದರಿಂದ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸಿದಂತಾಗುತ್ತಿದೆಯಲ್ಲವೇ?

# DEMUTUALIZATION AND ITS IMPACT ON COOPERATIVE SECTOR



**- Shri Yashavantha Dongre**

Ever since globalization has spread across the world and neo-liberal economic policies have become the main approach of the governments, people's organizations have come under a great threat. The space for voluntary initiatives such as cooperatives and non-profits has been narrowed down whereas the private for-profit sector has become a dominant market player. This has forced business enterprises like cooperatives to embark on innovations in all fronts. While these innovations have led to many positive developments such as new modes of mobilization of resources, partnership with private sector, diversification into new lines of business etc., some negative trends too have emerged. One such trend is the Demutualization of cooperatives and mutuals widely seen in USA and Canada and lately also in countries like Australia and New Zealand. This trend has brought in new tensions and has raised doubts about the basic intent of cooperative members.

### What is Demutualization?

Demutualization is the process by which a customer-owned mutual organization (mutual) or co-operative changes legal form to a joint stock company. In other words, the cooperative members will decide to change the legal status of the cooperative into an investor owned company. When a cooperative is demutualized, the members shares get converted into equity of the new company and the shares become tradable in the stock market. The new company may go for Initial Public Offer and raise capital from the public. This means demutualization is a process that makes cooperative loose its basic cooperative identity and become a for-profit enterprise.

A report on demutualization prepared in Canada during 2015 aptly summarizes demutualization in the following lines. "Demutualization is the conversion of a co-operative, credit union or mutual into an alternative organizational form (usually one owned by investors). Demutualization can occur through the conversion of equity into investment shares, or it can occur via a merger, takeover or buyout involving companies that are not co-operatives or mutuals. Regardless of the form it takes, demutualization involves the transfer to private investors of the capital that has been built up over the years in the co-operative.

### Reasons for Demutualization :

Demutualization may occur for a variety of reasons. Some have their roots in the negative side of a cooperative while others originate from positive aspects. Some others are uncontrollable reasons emanating from sources outside the cooperatives. Broadly any one or many of the following reasons may be attributed to demutualization.

The key reasons what stem from outside the cooperative include changing economic and political climate that is hostile to cooperatives and facilitative of investor owned enterprises, the increased competition and the need for professionalization, government policies that necessitate conversion of cooperatives into other types of organizations and acquisition of a cooperative by a non-cooperative buyer.

On the negative side of a cooperative, the reasons may include the need for reorganization of a cooperative which is under continuous loss, the need to infuse large amount of capital that a cooperative cannot mobilize where as an investor owned firm can, the inability of a cooperative to expand and diversify either due to lack of professionalism or due to restrictions on cooperatives, mismanagement by the cooperative board or employees necessitating liquidation or sell off etc.

Sometimes the positive aspects of a cooperative may also induce the members and the management to seek demutualization. For example, when a cooperative becomes very popular, members may feel that if it is converted into a company the value of their shareholding multiplies many times. Members may be interested in capitalizing on the brand value of the cooperative by making shares tradable. Sometimes, the management of the cooperative may feel that by converting into an investor owned company they can compete better and run the business activities with greater efficiency. In their pursuit of becoming larger and stronger some successful cooperatives may merge and create a new company.

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 36
Licensed to post without Prepayment License No. PMG BG/WPP-384/2020-2022.


## Demutualization in India :

At present there is no demutualization trend in Indian cooperative sector. However, in 2015 a Higher Powered Committed of Reserve Bank of India Chaired by Mr. R. Gandhi did recommend that some of the large cooperatives, the large urban cooperative banks may be converted into joint stock companies. The report stated that these cooperatives are too big to be cooperatives, if they remain cooperatives RBI cannot control them properly because their governance is controlled either by the Multi-State Cooperative Act or by the respective State Cooperative Acts and since large amount of public money is at stake it is better for them to become similar to other commercial banks. The report also argued that by demutualizing these UCBs can grow much bigger, can become more professional and it is in the best interest of the banking sector in the country.

When the RBI called for public opinion on the report of the Gandhi Committee, the National Federation of Urban Cooperative Banks opposed the move and argued that "the accumulated surplus of a co-operative is the culmination of efforts of members of the co-operative over the years and generations. Present members are bound by co-operative values and principles to pass it on to the next generation with some improvement. It is commonly known as intergenerational capital. Unlike in joint stock companies, the shares held by members of a co-operative do not have a concept of book value or market value as the reserves are not all distributable among members nor are the shares of co-operatives traded like shares of companies. Therefore, the envisaged introduction of provision to convert a multistate co-operative society into a joint stock company or any other form of business entity is unethical and anti-co-operative. It is antithesis of 97 Constitution Amendment that enjoins upon state through a directive principle to endeavour to promote co-operatives,"

## Effect of demutualization on cooperative sector :

Demutualization certainly goes against the idea of cooperation and the values and principles of cooperative movement. The key cooperative elements viz., voting rights linked to member and not the shareholding and the dividend distribution linked to usage of cooperative services than amount invested, changes the moment cooperatives are demutualized. Given the fact that cooperatives are essentially constructive competitors and never seek to become monopolies, there is no need for them to outgrow the private sector nor create greater shareholder value. Cooperatives do not seek to maximize profit and basically try to meet the unmet demand. Therefore, demutualization cannot be a solution and cannot be a measure of improving the efficiency of the cooperative sector.

The foundation of cooperative movement is the cooperative identity. Demutualization defeats this very identity. It makes members run after the market value of the shares than seek to create values based on mutuality. In other words, demutualization makes cooperatives convert themselves into those structures which they have been opposing all along. Therefore, demutualization is detrimental to the interest of both cooperatives and the cooperative members.

Innovations in the cooperative sector is certainly required. Innovative measures of mobilizing financial resources and attaining greater professionalism are very much necessary. Therefore, many cooperatives in Europe are moving towards hybridization but not demutualization. Hybridization may include measures such as merger among cooperatives, downsizing through technology adaptation, C2C business expansion and diversification, Partnering with private sector for funding as well as marketing of goods and services and more importantly allowing non-voting members who bring in larger capital to the cooperatives etc. Cooperatives in India too need to think in terms of similar innovations, of course based on the ground realities of our cooperative sector.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010